CREATIVE
EDUCATION FOUNDATION MOODBIDRI (R)

# ಕ್ರಿಯೇಟಿವ್ ನಿನಾದ

ವಿಶ್ವ ಮಾನವ ದಿನ
ಜ್ಞಾನಪೀಠ ಪುರಸ್ಕೃತ
ರಾಷ್ಟ್ರಕವಿ ಕುವೆಂಪು
ಜನ್ಮದಿನೋತ್ಸವ



ಸೆಪ್ಟೆಂಬರ್-ನವೆಂಬರ್ 2023

ತ್ರೈಮಾಸಿಕ ಪತ್ರಿಕೆ | ಕ್ರಿಯಾಶೀಲ ಮನಸ್ಸುಗಳಿಗಾಗಿ... | ಸಂಪುಟ 2 ಸಂಚಿಕೆ 6

## ಸ|ರಿ|ಗ|ಮ|ಪ|ದ|ನಿ

## ಕಾರ್ಕಳ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನಕ್ಕೆ "ಪಂಚರತ್ನ ಪ್ರಶಸ್ತಿ" ಪುರಸ್ಕಾರ




ಶಿಕ್ಷಣ ಕ್ಷೇತ್ರದಲ್ಲಿ ಅತೀ ಕಡಿಮೆ ಅವಧಿಯಲ್ಲಿ ಉತ್ಕೃಷ್ಟ ಸಾಧನೆಯನ್ನು ಮಾಡಿದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳಕ್ಕೆ ಜೆಸಿಐ ವತಿಯಿಂದ 'ಪಂಚರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.



**ಸಂಸ್ಥಾಪಕರು**
**ಕ್ರಿಯೇಟಿವ್ ಶಿಕ್ಷಣ ಸಂಸ್ಥೆಗಳು ಕಾರ್ಕಳ, ಉಡುಪಿ ಜಿಲ್ಲೆ**

## ಕ್ರಿಯೇಟಿವ್ ಕಾಲೇಜಿನ ವಾರ್ಷಿಕೋತ್ಸವ ಆವಿರ್ಭವ್-2023



**(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)**

**'ವಸುಧೈವ ಕುಟುಂಬಕಂ'** ಪರಿಕಲ್ಪನೆಯ ಮೂಲಕ ಎಲ್ಲ ಭಾಷೆಗಳನ್ನು ಗೌರವಿಸುವ ಮತ್ತು ಪರಿಚಯಿಸುವ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವವು ಹಿರ್ಗಾನದ ಆದಿಲಕ್ಷ್ಮೀ ಮಹಾಲಕ್ಷ್ಮೀ ದೇವಸ್ಥಾನದ ಗೀತಾಂಜಲಿ ಸಭಾಭವನದಲ್ಲಿ ನೆರವೇರಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಖ್ಯಾತ ವಾಗ್ಮಿ, ರಾಮಕೃಷ್ಣ ಕಾಲೇಜು, ಮಂಗಳೂರು ಇದರ ಪ್ರಾಂಶುಪಾಲರಾದ ಬಾಲಕೃಷ್ಣ ಶೆಟ್ಟಿ ಅವರು ಜೀವನದ ಎಲ್ಲ ಹಂತಗಳಲ್ಲಿ ಹೋರಾಟ ಇರುತ್ತದೆ. ಕಠಿಣ ಪರಿಶ್ರಮ, ನಿರಂತರ ತೊಡಗಿಸಿಕೊಳ್ಳುವಿಕೆ, ಬಂದ ಸವಾಲುಗಳಿಗೆ ಎದೆಯೊಡ್ಡಿ ನಿಂತು ಎದುರಿಸಿದರೆ ಆಗ ಯಶಸ್ಸು ಹಿಂಬಾಲಿಸಿ ಬರುತ್ತದೆ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಕ್ರಿಯೇಟಿವ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ರಾಜ್ಯದ ವಿವಿಧ ಪ್ರತಿಷ್ಠಿತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪ್ರಾಚಾರ್ಯರಾದ ವಿದ್ವಾನ್ ಗಣಪತಿ ಭಟ್ ಸಂಸ್ಥೆಯ ಸಾಧನೆಗಳನ್ನು ತಿಳಿಸುವ ವಾರ್ಷಿಕ ವರದಿ ವಾಚಿಸಿದರು. ಸಂಸ್ಥೆಯ ಸಂಸ್ಥಾಪಕರಲ್ಲೋರ್ವರಾದ ಡಾ. ಗಣನಾಥ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥಾಪಕರಾದ ಅಶ್ವತ್ ಎಸ್.ಎಲ್ ಅವರು ವಿದ್ಯಾರ್ಥಿಗಳನ್ನು ಕೇವಲ ಅಂಕ ಗಳಿಕೆಗೆ ಮಾತ್ರ ಸೀಮಿತಗೊಳಿಸದೆ ಕಲೆ, ಸಂಸ್ಕೃತಿಯ ಮೂಲಕ ಶ್ರೀಮಂತ ಮೌಲ್ಯಗಳನ್ನು ತಿಳಿಸಲಾಗುತ್ತದೆ ಎಂದು ನುಡಿದರು.

## ಹೆಚ್.ಕೆ.ಎಸ್ ಆವಿರ್ಭವ್ ವಾರ್ಷಿಕೋತ್ಸವ

**ಹಾಸನ:** ಹೆಚ್.ಕೆ.ಎಸ್ ಪದವಿ ಪೂರ್ವ ಕಾಲೇಜ್‌ನಲ್ಲಿ 'ಆವಿರ್ಭವ್ 2023' ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ ಅಂತರರಾಷ್ಟ್ರೀಯ ಚಲನಚಿತ್ರ ನಿರ್ದೇಶಕ, ನಿರ್ಮಾಪಕ ಮತ್ತು ನಟ ನಿಕಟ ಪೂರ್ವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಟಿ.ಎಸ್. ನಾಗಾಭರಣರವರು ಈ ಸಂದರ್ಭದಲ್ಲಿ ಕನ್ನಡದ ವೈಚಾರಿಕ ಪರಂಪರೆ, ಕನ್ನಡ ತತ್ವ, ಕನ್ನಡ ನಾಡು–ನುಡಿಯನ್ನು ಕುರಿತು ಮಾತನಾಡಿದರು. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕರಾದ ಡಾ. ಬಿ. ಗಣನಾಥ್ ಶೆಟ್ಟಿ ಯವರು ಪ್ರಾಸ್ತಾವಿಕವಾಗಿ ಕಾರ್ಯಕ್ರಮದ ರೂಪುರೇಷೆಯನ್ನು ಕುರಿತು ಮಾತನಾಡುತ್ತಾ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಆರಾಧಿಸುವ ಕಾರ್ಯಕ್ರಮವನ್ನು ಕಾಲೇಜು ನಡೆಸುತ್ತಾ ಬಂದಿರುವುದನ್ನು ತಿಳಿಸಿದರು ಹಾಗೂ ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಯ ಬಗೆಗೂ ಮಾಹಿತಿ ನೀಡಿದರು.

ಪ್ರಾಂಶುಪಾಲರಾದ ವಿಮಲ್ ರಾಜ್ ಜಿ. ರವರು 2023–24ನೇ ಶೈಕ್ಷಣಿಕ ಸಾಲಿನ ಕಾಲೇಜು ವಾರ್ಷಿಕ ವರದಿಯನ್ನು ವಾಚಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಮಹಾಲಿಂಗಯ್ಯ ಸಿ.ಎಂ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಹೆಚ್.ಕೆ.ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಹೆಚ್.ಎಸ್. ಪ್ರಶಾಂತ್ ಗೌಡ ರವರು ವಿದ್ಯಾರ್ಥಿಗಳಿಗೆ ಹಿತವಚನ ನೀಡಿದರು. ಹೆಚ್.ಕೆ.ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಕೆ. ಸುರೇಶ್ ರವರು ಅಧ್ಯಕ್ಷೀಯ ನೆಲೆಯಲ್ಲಿ ಮಾತನಾಡುತ್ತಾ ಈ ಭಾಗದಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಂಸ್ಥೆಯನ್ನು ಕಟ್ಟಿದ್ದೇನೆ ಹಾಗೂ ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಂಡು ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಬೆಳೆಯುವಂತಾಗಬೇಕು ಎಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು.

## ಕ್ರಿಯೇಟಿವ್ ಪ.ಪೂ ಕಾಲೇಜು, ಉಡುಪಿ ಕಾಲೇಜು ವಾರ್ಷಿಕೋತ್ಸವ

**(ಕ್ರಿಯೇಟಿವ್ ಮೀಡಿಯಾ : ಉಡುಪಿ)**

ತ್ರಿಶಾ ಪದವಿ ಪೂರ್ವ ಕಾಲೇಜಿನ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಿಲಾಗ್ರಿಸ್ ಚರ್ಚ್‌ನ ಧರ್ಮಗುರುಗಳಾದ ವಲೇರಿಯನ್ ಮೆಂಡೊನ್ಸಾ ಮುಖ್ಯ ಅತಿಥಿಗಳಾಗಿ ಆಗಮಿಸಿ ಕ್ರಿಯೇಟಿವ್ ಶಿಕ್ಷಣ ಸಂಸ್ಥೆ ಸಮಾಜದಲ್ಲಿ ಜವಾಬ್ದಾರಿಯುತವಾದ ಒಂದು ಸಮುದಾಯವನ್ನು ನಿರ್ಮಾಣ ಮಾಡುವ ಕನಸು ಕಂಡು ಉತ್ತಮ ರೀತಿಯಿಂದ ಮುನ್ನಡೆಯುತ್ತಿದೆ ಎಂದರು. ಸಂಸ್ಥಾಪಕರಲ್ಲಿ ಓರ್ವರಾದ ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್ ಅವರು ತ್ರಿಶಾ ವಿದ್ಯಾ ಸಂಸ್ಥೆಯನ್ನು ಆರಂಭಿಸಿದಾಗ ಸಹಜವಾಗಿ ಎಲ್ಲರಲ್ಲೂ ಕುತೂಹಲ ನಿರೀಕ್ಷೆಗಳಿದ್ದವು. ಇಂದು ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ಬೆಳೆಸಲಾಗುತ್ತಿದೆ ಎಂದು ಅಭಿಪ್ರಾಯ ಪಟ್ಟರು, ಸಂಸ್ಥಾಪಕರಾದ ಅಮೃತ್ ರೈ ಮಾತನಾಡಿ ಯಾವ ವಿದ್ಯಾರ್ಥಿಯೂ ಶಿಕ್ಷಣದ ವ್ಯವಸ್ಥೆಯಲ್ಲಿ ಹಿಂದುಳಿಯಬಾರದೆಂಬ ಉದ್ದೇಶ ಹೊಂದಿದ್ದೇವೆ ಹಾಗೂ ಸಂಸ್ಥೆ ಸದಾಕಾಲ ವಿದ್ಯಾರ್ಥಿಗಳ ಅಭ್ಯುದಯ ಬಯಸುತ್ತದೆ ಎಂದು ತಿಳಿಸಿದರು. ಸಂಸ್ಥಾಪಕರಾದ ಆದರ್ಶ ಎಂ.ಕೆ ಸಂಸ್ಥೆ ಇದುವರೆಗೆ ಎದುರಿಸಿದ ಸವಾಲುಗಳು ಹಾಗೂ ಸಮಸ್ಯೆಗಳನ್ನು ಮೆಲುಕು ಹಾಕಿದರು.

ಇನ್ನೋರ್ವ ಸಂಸ್ಥಾಪಕರಾದ ಅಶ್ವತ್ ಎಸ್. ಎಲ್ ಮಾತನಾಡಿ ನಮ್ಮ ತಂದೆ ತಾಯಿ ಹಾಗೂ ಗುರುಹಿರಿಯರ ಮಾರ್ಗದರ್ಶನದಿಂದ ನಾವು ಶಿಕ್ಷಣ ಕ್ಷೇತ್ರದಲ್ಲಿ ಪ್ರೀತಿಪೂರ್ವಕವಾಗಿ ಸೇವೆ ಮಾಡುತ್ತಿದ್ದೇವೆ ಎಂದರು.

ಮತ್ತೋರ್ವ ಸಂಸ್ಥಾಪಕರಾದ ಗಣಪತಿ ಕೆ.ಎಸ್ ಮಾತನಾಡಿ ನಮ್ಮ ಶೈಕ್ಷಣಿಕ ಸಹಭಾಗಿತ್ವದ ಮೂರೂ ಸಂಸ್ಥೆಗಳಲ್ಲಿ ಏಕರೂಪದ ಶಿಕ್ಷಣದ ವ್ಯವಸ್ಥೆ ಕಲ್ಪಿಸಿರುವುದನ್ನು ತಿಳಿಸಿದರು.

ಸಂಸ್ಥೆ ನಡೆದು ಬಂದ ರೀತಿ ಹಾಗೂ ಆಶಯದ ಬಗ್ಗೆ ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿ ವಿವರಿಸಿದರು. ಹೆಚ್.ಕೆ.ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಹಾಗೂ ಸಂಸ್ಥಾಪಕರಾದ ವಿಮಲ್ ರಾಜ್. ಜಿ ಮಾತನಾಡಿ ಪ್ರಾರಂಭದ ದಿನಗಳಿಂದ ನಮ್ಮ ವಿದ್ಯಾ ಸಂಸ್ಥೆಯಲ್ಲಿ ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗೆ ಅತ್ಯುತ್ತಮ ವ್ಯವಸ್ಥೆಗಳನ್ನು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಯನ್ನು ನಡೆಸುತ್ತಿದ್ದೇವೆ ಎಂದು ಹೇಳಿದರು.








ಕ್ರಿಯೇಟಿವ್ ಪುಸ್ತಕ ಮನೆ, ಕಾರ್ಕಳ
ಪುಟಗಳೊಂದಿಗೆ ಪಯಣ...
+91 96064 74289
www.pustakamane.com
CREATIVE

## ಕ್ರಿಯೇಟಿವ್ ನಿನಾದ

ಪ್ರಕಟಣೆ
ಕ್ರಿಯೇಟಿವ್ ಪುಸ್ತಕ ಮನೆ
#4-64/10, ಆದಿಧನ್ ದುರ್ಗಾ ಎನ್‌ಕ್ಲೇವ್,
ಜೋಡುರಸ್ತೆ, ಕಾರ್ಕಳ - 576 117

ಪ್ರತಿಗಳಿಗಾಗಿ : +91 96064 74289
ಇ-ಮೇಲ್: ninada@creativeedu.in

ಕ್ರಿಯೇಟಿವ್ ನಿನಾದ ಬಳಗ

**ಗೌರವ ಸಂಪಾದಕರು**
ವಿದ್ವಾನ್ ಗಣಪತಿ ಭಟ್
ಡಾ. ಗಣನಾಥ ಶೆಟ್ಟಿ
ಅಮೃತ್ ರೈ
ಆದರ್ಶ ಎಂ.ಕೆ
ವಿಮಲ್ ರಾಜ್ ಜಿ.
ಗಣಪತಿ ಕೆ.ಎಸ್

**ಪ್ರಧಾನ ಸಂಪಾದಕರು**
ಅಶ್ವತ್ ಎಸ್.ಎಲ್.

**ಸಂಪಾದಕರು**
ರಾಘವೇಂದ್ರ ಬಿ.ರಾವ್ (ಅನು ಬೆಳ್ಳೆ)
ರಾಜೇಶ್ ಶೆಟ್ಟಿ

**ಸಲಹಾ ಮಂಡಳಿ**
ಕಾರ್ಕಳ ● ರಾಮಕೃಷ್ಣ ಹೆಗಡೆ, ಶಿವಕುಮಾರ್, ವಿನಾಯಕ ಜೋಗ್, ಮಹೇಶ್ ಶೆಣೈ, ಉಮೇಶ್ ಕೆ., ಅಶನ್ ಗೌಡ, ಪ್ರೇರಣಾ ನರೇಶ್ ಬಿ.ಆರ್
ಹಾಸನ ● ಮಹೇಶ್, ಸತೀಶ್ ಆಚಾರ್ಯ, ರಮೇಶ್, ವಿಘ್ನೇಶ್ ಕಾಮತ್
ಉಡುಪಿ ● ಸ್ಟ್ಯಾನಿ ಲೋಬೋ, ಸಂತೋಷ್

ಸಂಪಾದಕೀಯ...

## ಮೊಬೈಲ್ ಬಿಡಿ, ಪುಸ್ತಕ ಹಿಡಿ...

**ಯುಗಕ್ಕೊಂದು ಜಗಕ್ಕೊಂದು ಹೊಸ ಹೆಸರು ಬೇಕು**
**ನಗೆಗೊಂದು ಬಗೆಗೊಂದು ಹೊಸ ಕುಸುರು ಬೇಕು**
**ಹೊಸತನವೇ ಜೀವನದ ಪ್ರಗತಿಯ ರಹಸ್ಯ**
**ಹೊಸತನವೇ ಮನುಜತೆಯ ಮೈಸಿರಿಯ ಲಾಸ್ಯ**

ಎಂಬ ಗೋಪಾಲಕೃಷ್ಣ ಅಡಿಗರ ಸಾಲಿನಂತೆ ನಮ್ಮ ದಿನನಿತ್ಯದ ಜೀವನ ಹೊಸ ಹುರುಪು ಪಡೆಯಲು, ನವ ಚೈತನ್ಯ ಗಳಿಸಲು ಯಾವುದಾದರೊಂದು ಹೊಸತನದ ಭಾವ ಸಾಕು.

ಅದರಂತೆಯೇ, ಕಾಲಚಕ್ರದ ಚಲನೆಯಲ್ಲಿ ಜನವರಿ 01 ಸಹಜವಾಗಿ ಬರುವ ಒಂದು ದಿನಾಂಕವಾದರೂ, ಕ್ಯಾಲೆಂಡರ್ ಅಂಕಿಸಂಖ್ಯೆಗಳ ದಿನಾಂಕದ ಪುನರಾವರ್ತನೆಯ ಮೊದಲ ದಿನವಾಗಿ ಇನ್ನೊಂದಷ್ಟು ಹೊಸ ಸಂಕಲ್ಪ, ಹೊಸ ಭರವಸೆಗಳನ್ನು ಸೃಷ್ಟಿಸಿಕೊಳ್ಳಲು ನಮಗೆ ಸಿಗುವ ಸುವರ್ಣಾವಕಾಶ.

2024 ರ ಈ ಹೊಸ ಹೆಸರಿನೊಂದಿಗೆ ಜೀವನ ಪ್ರೀತಿಯ ನಗೆಗೊಂದು ಹೊಸ ಕುಸುರು ಮನಸ್ಸಿನಲ್ಲಿ ಮೂಡಿತು. ಅದು ಮಕ್ಕಳ ಮಸ್ತಕದಲ್ಲಿ ಪುಸ್ತಕ ತುಂಬಿಸುವ ಕಾರ್ಯ. ಹೊಸವರ್ಷದ ಹೊಸ್ತಿಲಲ್ಲಿ ಹೊತ್ತಗೆಯ ಹಂಚುವ ಹೊಸ ಸಂಕಲ್ಪ ಮಾಡಿ ಹೊರಟ ನಮಗೆ ಅತ್ಯಂತ ಹರುಷದ ಸ್ಪಂದನೆ ಸಿಕ್ಕಿದೆ.

ದಿನಕ್ಕೊಂದು ಪುಸ್ತಕ ವಿವಿಧ ಪ್ರದೇಶಗಳ ಶಾಲಾ ಮಕ್ಕಳಿಗೆ ತಲುಪಿಸುವ ಅಭಿಯಾನ ಇದು. ಸಂಜೆ ಶಾಲೆ ಮುಗಿಸಿ ಮನೆಗೆ ಬಂದ ನಂತರ ಮೈದಾನದಲ್ಲಿ ಆಟವಾಡಿ, ನಂತರ ದೇವರ ಭಜನೆ ಮಾಡಿ, ಓದುವ ಕಾಲವೊಂದಿತ್ತು. ಈಗ ಶಾಲೆ ಮುಗಿಸಿ ಬಂದ ನಂತರ ಆ ಎಲ್ಲಾ ನೈಸರ್ಗಿಕ ರಮ್ಯತೆಯ ಅನುಭವದಿಂದ ವಿಮುಖರಾಗಿ ಮೊಬೈಲ್‌ನಲ್ಲಿ ಮುಳುಗುವ ಹವ್ಯಾಸ. ಇದರಿಂದ ಉಪಕಾರಕ್ಕಿಂತ ಅಪಾಯವೇ ಅಧಿಕ.

ಇಂತಹ ಗೀಳಿನಿಂದ ಹೊರತಂದು ಮೊಬೈಲ್ ಹಿಡಿದ ಕೈಗಳಲ್ಲಿ ಪುಸ್ತಕ ಹಿಡಿಸಬೇಕೆಂಬುದು ನಮ್ಮ ಆಶಯ. ಸುಲಭದ ಹಾದಿಯಲ್ಲವೆಂದು ತಿಳಿದೂ ಈ ಕೈಂಕರ್ಯದಲ್ಲಿ ಅಂಬೆಗಾಲನ್ನು ಇರಿಸಿದ್ದೇವೆ. ಕ್ರಿಯೇಟಿವ್ ಪುಸ್ತಕ ಮನೆಯ **"ಮೊಬೈಲ್ ಬಿಡಿ ಪುಸ್ತಕ ಹಿಡಿ"** ಯೋಜನೆಯಿಂದ ದಿನಕ್ಕೊಂದು ಪುಸ್ತಕ ತಲುಪಿಸಲು ಹೊರಟ ನಮಗೆ ಪುಸ್ತಕ ದಾನಿಗಳಿಂದ ಅತ್ಯುನ್ನತ ಸ್ಪಂದನೆ ಸಿಕ್ಕಿದ್ದು, ದಿನಕ್ಕೊಂದರ ಬದಲು 10 ಪುಸ್ತಕ ಹಂಚುವ ಕೆಲಸ ಅತ್ಯಂತ ಸಂತೃಪ್ತಿಯ ಭಾವದಿಂದ ಸಾಗುತ್ತಿದೆ.

ಈ ಅಭಿಯಾನದಲ್ಲಿ ಯಾರು ಬೇಕಾದರೂ ಪುಸ್ತಕ ದಾನಿಯಾಗ ಬಹುದು. ದಾನಿಗಳು ಪಾವತಿಸಿದ ಹಣದಿಂದ ಸೂಕ್ತ ಪುಸ್ತಕಗಳನ್ನು ಆಯ್ಕೆ ಮಾಡಿ ಶಾಲಾ ಮಕ್ಕಳಿಗೆ ಹಂಚುವ ಕೆಲಸ ಸಾಗುತಲಿದೆ. ಇದರ ಜೊತೆಗೆ ಒಂದು ಅಂಚೆ ಪತ್ರವನ್ನು ನೀಡುತ್ತಿದ್ದೇವೆ. ಪುಸ್ತಕ ಪಡೆದ ಮಕ್ಕಳು ದಾನಿಗಳಿಗೆ ಪತ್ರ ಬರೆಯುವ ಮೂಲಕ ಮರೆಯಾಗಿ ಹೋಗಿರುವ ಅಂಚೆ ಪತ್ರ ಬರೆಯುವ ಹವ್ಯಾಸವನ್ನು ಮರುಸ್ಥಾಪಿಸುವ ಯೋಚನೆ.

ಮಕ್ಕಳಿಗೆ ಮೊಬೈಲ್ ಬಿಡಿ ಪುಸ್ತಕ ಹಿಡಿ ಎಂದು ಹೇಳುವ ಬಲ್ಲವರು ನಾವುಗಳೂ ಕೂಡ ಇದನ್ನು ಪಾಲಿಸುವ ಕಡೆ ಗಮನ ಕೊಟ್ಟರೆ ಒಳಿತು. ನಮ್ಮ ಎಲ್ಲಾ ಚಲನವಲನಗಳನ್ನು ನೇರವಾಗಿ ಪಾಲಿಸುವವರು ಮಕ್ಕಳು. ಹಾಗಾಗಿ ನಾವು ಮೊದಲು ಪುಸ್ತಕದ ಪುಟ ತೆರೆಯುವ ಹವ್ಯಾಸ ರೂಢಿಸಿಕೊಂಡರೆ ಸಹಜವಾಗಿ ಮಕ್ಕಳು ಆ ಕಡೆಗೆ ಗಮನ ಕೊಡಬಲ್ಲರು. ತದನಂತರ ಅವರಿಗೆ ಇಷ್ಟವಾಗುವ ಪುಸ್ತಕಗಳನ್ನು ನಾವು ಒದಗಿಸಬೇಕು. ನಮ್ಮ ಪುರಾಣ ಕಥೆಗಳಿಂದ ಪ್ರಾರಂಭಿಸಿ ಕುತೂಹಲದ ಕಥೆಯ ಜೊತೆಜೊತೆಗೆ ನಮ್ಮ ಕಲೆ, ಸಂಸ್ಕೃತಿ, ಆಚಾರ-ವಿಚಾರವನ್ನು ನವಿರಾಗಿ ವಿವರಿಸುವ ಶ್ರೀಮಂತ ಪರಂಪರೆಯನ್ನು ಚಿತ್ರಿಸುವ ಕೃತಿಗಳನ್ನು ಓದಿಸಬೇಕು. ಈ ರೀತಿ ಬಾಲ್ಯದಿಂದಲೇ ಪುಸ್ತಕ ಓದುವ ಹವ್ಯಾಸ ರೂಢಿಸಿಕೊಂಡರೆ ಜ್ಞಾನಭಂಡಾರದಲ್ಲಿ ಮುಂದೆ ಎಂದೂ ಬತ್ತದ ಅಕ್ಷಯ ನಿಧಿಯಾಗಿ ಅವರು ಬೆಳೆಯುವುದರಲ್ಲಿ ಸಂದೇಹವಿಲ್ಲ.

ಅಂತೆಯೇ ಹೊಸ ವರ್ಷ ತಮ್ಮೆಲ್ಲರ ಬಾಳಲ್ಲಿ ನಿಮ್ಮ ಇಷ್ಟದ ಹಾರೈಕೆಯನ್ನು ಪೂರೈಸಲಿ ಎಂದು ಆಶಿಸುತ್ತಾ,



**ಅಶ್ವತ್ ಎಸ್.ಎಲ್.**
**ಪ್ರಧಾನ ಸಂಪಾದಕರು,**
ಕ್ರಿಯೇಟಿವ್ ನಿನಾದ, ಕಾರ್ಕಳ

**ಹೊಸ ವರ್ಷ**
**ಹೊಸ ಸಂಕಲ್ಪದೊಂದಿಗೆ**
ದಿನಕ್ಕೊಂದು ಪುಸ್ತಕ ಶಾಲಾ ಮಕ್ಕಳಿಗೆ ತಲುಪಿಸುವ ಅಭಿಯಾನ
**ಮೊಬೈಲ್ ಬಿಡಿ.. ಪುಸ್ತಕ ಹಿಡಿ..**

ಕ್ರಿಯೇಟಿವ್ ಪುಸ್ತಕ ಪೋಷಕ ಯೋಜನೆ

ನೀವು ಪುಸ್ತಕ ದಾನಿಗಳಾಗಿ...

| | |
|---|---|
| 1 ಪುಸ್ತಕಕ್ಕೆ | ರೂ. 180/- |
| 3 ಪುಸ್ತಕಗಳಿಗೆ | ರೂ. 500/- |
| 1 ವಾರದ ಪುಸ್ತಕಗಳಿಗೆ | ರೂ. 1000/- |

ಕ್ರಿಯೇಟಿವ್ ಪುಸ್ತಕ ಮನೆ
ಹಣ ಪಾವತಿಗಾಗಿ ಇದನ್ನು ಬಳಸಿ
PUSTAKA MANE
BHIM UPI
ನಿಮ್ಮ ವಿಳಾಸವನ್ನು ಈ ನಂಬರ್‌ಗೆ ವಾಟ್ಸಪ್ ಮಾಡಿ
+91 96064 74289

# ಪುಸ್ತಕ ಮನೆ

## ಕಾರ್ಕಳದ ಜನತೆಗೆ ಒಂದೇ ಕಡೆಯಲ್ಲಿ ಸಿಗಲಿದೆ ಸಾಹಿತ್ಯ ಕೃತಿ ಭಂಡಾರ

(ಕ್ರಿಯೇಟಿವ್ ಮೀಡಿಯಾ : ಕಾರ್ಕಳ)



ಸಾಹಿತ್ಯಾಸಕ್ತರಿಗೆ, ಓದುಗರಿಗೆ ಎಲ್ಲ ರೀತಿಯ ಪುಸ್ತಕಗಳು ಹಾಗೂ ಓದಿನ ಅಭಿರುಚಿಯನ್ನು ಬೆಳೆಸುವ ಮಹತ್ವಾಕಾಂಕ್ಷೆಯಿಂದ ಕಾರ್ಕಳದ ಜೋಡುರಸ್ತೆಯ ಆದಿಧನ್ ಎನ್‌ಕ್ಲೇವ್‌ನಲ್ಲಿ ಬೃಹತ್ ಪುಸ್ತಕ ಮತ್ತು ಸ್ಟೇಶನರಿ ವಸ್ತುಗಳ ಮಳಿಗೆ ಕಾರ್ಕಳ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಶುಭಾರಂಭಗೊಂಡಿದೆ.

ಎಲ್ಲಾ ತರಹದ ವಯೋಮಾನದ ವ್ಯಕ್ತಿಗಳಿಗೆ ಪುಸ್ತಕ ಪ್ರಿಯರಿಗೆ ರಿಯಾಯಿತಿ ದರದಲ್ಲಿ ದೊಡ್ಡ ಮಟ್ಟದ ಪುಸ್ತಕ ಸಂಗ್ರಹವಿದೆ. ಕೃತಿಗಳನ್ನು ಅಲ್ಲಿಯೇ ಓದುವ ಅವಕಾಶವನ್ನೂ ಗ್ರಂಥಾಲಯದ ರೂಪದಲ್ಲಿ ವ್ಯವಸ್ಥೆ ಮಾಡಲಾಗಿದೆ. ದೂರದ ಊರುಗಳಿಂದ ಪುಸ್ತಕಗಳನ್ನು ಅಥವಾ ಸಾಮಾಗ್ರಿಗಳನ್ನು ತರಲು ಕಷ್ಟವಾಗುವುದರಿಂದ ಕಾರ್ಕಳದಲ್ಲಿಯೇ ಒಂದು ಹೊಸ ಪರಿಕಲ್ಪನೆಯ "ಪುಸ್ತಕ ಮನೆ" ದಿನಾಂಕ 16 ಅಕ್ಟೋಬರ್ 2023 ರಂದು ಶಾಸಕರಾದ ವಿ. ಸುನಿಲ್ ಕುಮಾರ್‌ರವರಿಂದ ಉದ್ಘಾಟನೆಗೊಂಡಿದೆ.

**ವಿಶೇಷತೆ :**

ಕಾರ್ಕಳ "ಪುಸ್ತಕ ಮನೆ" ಕ್ರಿಯೇಟಿವ್ ಸಂಸ್ಥೆಯ ಸಪ್ತ ಸಂಸ್ಥಾಪಕರ ಕನಸಿನ ಕೂಸು. ಕಾರ್ಕಳದ ಆಸುಪಾಸಿನ ಸಾಹಿತ್ಯದಲ್ಲಿ ಆಸಕ್ತಿ ಹೊಂದಿರುವ ಜನರಿಗೆ ಯಾವುದೇ ಲೇಖಕರ ಕೃತಿಗಳೂ ಸುಲಭದಲ್ಲಿ ಓದಲು ಸಿಗಬೇಕು ಮತ್ತು ಮುಂದಿನ ಪೀಳಿಗೆಯ ಜನರನ್ನು ಸಾಹಿತ್ಯಾಸಕ್ತರನ್ನಾಗಿಸಿ, ಕೃತಿ ಪರಿಚಯ ಮಾಡಿಸಬೇಕೆಂಬುದು ಹಿರಿಯ ಆಸೆ ಹಾಗೂ ಪುಸ್ತಕ ಮನೆಯಲ್ಲಿ ಕೇವಲ ಪುಸ್ತಕಗಳಷ್ಟೇ ಅಲ್ಲದೆ ಮಕ್ಕಳ ಮನೋವಿಕಾಸಕ್ಕೆ ಪೂರಕವಾಗುವ ಕ್ರಿಯಾಶೀಲ ಆಟದ ವಸ್ತುಗಳು, ಸ್ಟೇಶನರಿ, ಉಡುಗೊರೆಯ ಬೃಹತ್ ಸಂಗ್ರಹವಿದೆ. ಗ್ರಂಥಾಲಯಗಳಿಗೆ ಅಗತ್ಯವಿರುವ ಪುಸ್ತಕಗಳು ರಿಯಾಯಿತಿ ದರದಲ್ಲಿ ಲಭ್ಯವಿರಲಿದೆ ಮತ್ತು "ಆನ್ ಲೈನ್" ಪುಸ್ತಕ ಖರೀದಿಗೂ ಅವಕಾಶವಿದೆ.

**ಪುಸ್ತಕ ಪೋಷಕ ಯೋಜನೆ :**

ಈ ಯೋಜನೆಯಲ್ಲಿ ತಾವು ಓದಿದ ಯಾವುದೇ ಪುಸ್ತಕಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳನ್ನು ಕಾರ್ಕಳ ತಾಲೂಕಿನ ಅಗತ್ಯವಿರುವ ಬಡ ವಿದ್ಯಾರ್ಥಿಗಳಿಗೆ ಕೊಡಮಾಡುವ ಹಾಗೂ ಅವರಿಗೆ ಬೇಕಾದ ಎಲ್ಲಾ ರೀತಿಯ ಪುಸ್ತಕಗಳನ್ನು ಒದಗಿಸುವ ಸಮಾಜಮುಖಿ ಚಿಂತನೆಯ ಯೋಜನೆಯನ್ನು ಸಂಸ್ಥೆ ರೂಪಿಸಿದೆ. ಯಾವ ವಿದ್ಯಾರ್ಥಿಯೂ ಸಹ ಪಠ್ಯಪುಸ್ತಕದ ವೆಚ್ಚವನ್ನು ಭರಿಸಲಾಗದೇ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದಿದ್ದಲ್ಲಿ ಈ ಯೋಜನೆಯು ವಿದ್ಯಾರ್ಥಿಗಳಿಗೆ ಅತ್ಯಂತ ಅನುಕೂಲವಾಗಿ ಪರಿಣಮಿಸಲಿದೆ. ಇದಕ್ಕಾಗಿ ತಾವು ಓದಿ, ತಮಗೆ ಬೇಡವೆನಿಸಿದ ಪುಸ್ತಕಗಳನ್ನು ದಾನರೂಪದಲ್ಲಿ "ಪುಸ್ತಕ ಪೋಷಕ" ಯೋಜನೆಗೆ ನೀಡಬಹುದಾಗಿದೆ.

**ಮೆಂಬರ್ ಶಿಪ್ ಕಾರ್ಡ್ :**

ಪುಸ್ತಕ ಮನೆಯಲ್ಲಿ ಯಾವುದೇ ವಿಧದ ವಸ್ತು ಅಥವಾ ಪುಸ್ತಕಗಳನ್ನು ಖರೀದಿಸಿದಲ್ಲಿ 10 ರಿಂದ 15 ಶೇಕಡಾ ರಿಯಾಯಿತಿಯಲ್ಲಿ ಪಡೆಯಬಹುದಾಗಿದೆ ಮತ್ತು ವಾರ್ಷಿಕ ಮೆಂಬರ್ ಶಿಪ್ ಕಾರ್ಡ್‌ನ ರೂಪದಲ್ಲಿ ಪ್ರತೀ ಖರೀದಿಗೂ ಆಕರ್ಷಕ ದರಕಡಿತ ಸಿಗಲಿದೆ.

**ಚಿಣ್ಣರ ಅಚ್ಚು-ಮೆಚ್ಚಿನ ತಾಣ :**

ಚಿಣ್ಣರಿಗೆ ಇಲ್ಲಿ ಎಲ್ಲ ತರಹದ ಪಾಠ ಪುಸ್ತಕಗಳೊಂದಿಗೆ ಬೇಕಾದ ಎಲ್ಲಾ ರೀತಿಯ ಆಟಿಕೆಯ ವಸ್ತುಗಳು, ಕಥೆ ಪುಸ್ತಕಗಳು, ಡ್ರಾಯಿಂಗ್ ಸಾಧನಗಳು, ಸ್ಟೇಶನರಿ ವಸ್ತುಗಳು ಒಂದೇ ಮಳಿಗೆಯಲ್ಲಿ ದೊರಕಲಿದೆ. ವಿಶೇಷವಾಗಿ ಮಕ್ಕಳು ಇಷ್ಟಪಡುವ ಬೇಬಿ ಡಾಲ್‌ನ ಬೃಹತ್ ಸಂಗ್ರಹವಿದೆ. ಮಕ್ಕಳ ಕ್ರಿಯಾಶೀಲ ಕಲಿಕೆಗೆ ಪೂರಕವಾಗಿ ಶೈಕ್ಷಣಿಕ ಕಿಟ್ ಇಲ್ಲಿ ವಯೋಮಾನಕ್ಕನುಗುಣವಾಗಿ ರೂಢಿಸಲಾಗಿದೆ. ಇದರಿಂದ ಅತೀ ಚಿಕ್ಕಮಕ್ಕಳಿಂದ ಹಿಡಿದು ಹಿರಿಯರ ತನಕ ಎಲ್ಲರ ಮನೋವಿಕಾಸದ ಪೂರಕ ವ್ಯವಸ್ಥೆಗಳು ಒಂದೇ ಕಡೆ ಲಭ್ಯವಿದೆ.

## ಜಿಲ್ಲಾ ಮಟ್ಟದ ಕ್ರೀಡಾಕೂಟ ಹೆಚ್.ಕೆ.ಎಸ್‌ನ ಅದ್ಭುತ ಪ್ರದರ್ಶನ

**ಹಾಸನ:** ಹಾಸನದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಹೆಚ್.ಕೆ.ಎಸ್ ಪ.ಪೂ ಕಾಲೇಜು, ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಹಲವು ಕ್ರೀಡಾಕೂಟದಲ್ಲಿ ಚಿನ್ನ ಮತ್ತು ಬೆಳ್ಳಿ ಪದಕದೊಂದಿಗೆ ಅತ್ಯುತ್ತಮ ನಿರ್ವಹಣೆ ತೋರಿದೆ.

ಬಾಲಕಿಯರ ವಿಭಾಗದ ಬ್ಯಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಚಿನ್ನ, ಬಾಲಕರ ವಿಭಾಗದ ಬ್ಯಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಬೆಳ್ಳಿ, ಬಾಲಕರ ವಿಭಾಗದ ಯೋಗ ಸ್ಪರ್ಧೆಯಲ್ಲಿ ಶಮಿತ್ ಪಟೇಲ್ ಚಿನ್ನ, ನಿತಿನ್ ದೇವ್ ಕಂಚು, ಬಾಲಕಿಯರ ವಿಭಾಗದ ಯೋಗ ಸ್ಪರ್ಧೆಯಲ್ಲಿ ಶೃತಿ ಬೆಳ್ಳಿ, ಬಾಲಕರ ವಿಭಾಗದ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದು ಅದ್ಭುತ ಸಾಧನೆಗೈದಿದ್ದಾರೆ.



## ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆ



ಪ್ರೀತಿ ಸಿ.ಎಲ್



ಪೂರ್ವಿಕ್ ಕೆ.ಸಿ

**ಹಾಸನ:** ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳ ಇದರ ಶೈಕ್ಷಣಿಕ ಸಹಭಾಗಿತ್ವದಲ್ಲಿ ಕಾರ್ಯಾಚರಿಸುತ್ತಿರುವ ಹಾಸನದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಹೆಚ್.ಕೆ.ಎಸ್ ಪ.ಪೂ ಕಾಲೇಜಿನ ವಿದ್ಯಾರ್ಥಿಗಳಾದ ಪ್ರೀತಿ ಸಿ.ಎಲ್. ಮತ್ತು ಪೂರ್ವಿಕ್ ಕೆ.ಸಿ.ಯವರು ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಮತ್ತು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ಇವರ ಜಂಟಿ ಆಶ್ರಯದಲ್ಲಿ ನಡೆದ 2023-24ನೇ ಶೈಕ್ಷಣಿಕ ಸಾಲಿನ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಪಡೆದು ಅದ್ಭುತ ಸಾಧನೆಗೈದಿದ್ದಾರೆ.






**ಜ್ಞಾನವಿ ಹೆಚ್.ಡಿ**

"ದೇಶ ಸುತ್ತಿ ನೋಡು, ಕೋಶ ಓದಿ ನೋಡು" ಎಂಬ ಗಾದೆಯನ್ನು ಸರ್ವೇಸಾಮಾನ್ಯವಾಗಿ ಕೇಳಿರುತ್ತೇವೆ. ಒಂದು ಪ್ರದೇಶದ ಕುರಿತು ಹೇಗೆ ಅದನ್ನು ಆಸಕ್ತಿಯಿಂದ ಅಲ್ಲಿಗೇ ಹೋಗಿ ಪ್ರವಾಸದ ಮುಖೇನ ತಿಳಿದುಕೊಳ್ಳುತ್ತೇವೋ ಅಂತೆಯೇ ನಾವು ಕುಳಿತಿರುವಲ್ಲೇ ವಿಶ್ವವನ್ನು ಸಂಚಾರಿಸಬಹುದಾದ ಅವಕಾಶಗಳನ್ನು ಕಲ್ಪಿಸುವುದು 'ಪುಸ್ತಕಗಳು'. ಪ್ರಸ್ತುತ ಸಮಾಜದಲ್ಲಿ ಜಂಗಮವಾಣಿ, ಗಣಕಯಂತ್ರಗಳಂತಹ ವಸ್ತುಗಳ ಕೈಗೊಂಬೆಯಾಗಿ ಕುಣಿಯುತ್ತಿರುವ ನಮಗೆ ಪುಸ್ತಕ ಓದುವುದು ಎಂಬುದು ದೂರದ ಮಾತು. ಅಬ್ದುಲ್ ಕಲಾಂರವರು ಹೇಳುವಂತೆ "ಒಂದು ಒಳ್ಳೆಯ ಪುಸ್ತಕ; ನೂರು ಸ್ನೇಹಿತರಿಗೆ ಸಮ" ನಿಜಕ್ಕೂ ಸತ್ಯವಾದುದು. ಒಂದು ಪುಸ್ತಕ ಮನುಷ್ಯನ ಜೀವನದಲ್ಲಿ ಬಹುದೊಡ್ಡ ತಿರುವನ್ನೇ ತಂದುಕೊಡಬಹುದು. ನನ್ನ ಪ್ರಕಾರ ಮೂರಕ್ಷರದ ಪುಸ್ತಕವನ್ನು ಮೂರೇ ಅಕ್ಷರದ ಪ್ರಪಂಚಕ್ಕೆ ಹೋಲಿಸಿದರೆ ತಪ್ಪೇ ಇಲ್ಲ. ಹಾಗಾದರೆ ನಮ್ಮ ನಮ್ಮ ಮನೆಗಳಲ್ಲೇ ಒಂದೊಂದು ಗ್ರಂಥಾಲಯವನ್ನು ಪ್ರಾರಂಭಿಸಿದರೆ, ಪುಟ್ಟ ಪ್ರಪಂಚವನ್ನೇ ನಮ್ಮ ಜೊತೆಗಿರಿಸಿಕೊಂಡಂತೆ ಅಲ್ಲವೇ? ನನ್ನ ಮನೆಯಲ್ಲಿ ಅಪ್ಪ_ಅಮ್ಮ ಇಬ್ಬರೂ ಪುಸ್ತಕ ಪ್ರೇಮಿಗಳಾದ್ದರಿಂದ ಮನೆಕಟ್ಟುವ ಸಂದರ್ಭದಲ್ಲಿಯೇ ಗ್ರಂಥಾಲಯಕ್ಕೊಂದು ಜಾಗವನ್ನು ಮೀಸಲಿಡಲಾಗಿತ್ತು. ಹೀಗೆ "ಜ್ಞಾನದೀಪ" ಗ್ರಂಥಾಲಯದಲ್ಲಿ ಸುಮಾರು 1500 ಪುಸ್ತಕಗಳ ಪುಟ್ಟ ಪ್ರಪಂಚವೇ ಇದೆ.

ನಾನು ಹರೀಶ್ ಮಂಜೊಟ್ಟಿ ಪುಸ್ತಕ ಸಂಗ್ರಹ, ಓದು ಮತ್ತು ಬರವಣಿಗೆ ಹವ್ಯಾಸ.. ನನ್ನ ಬಳಿ 94 ಕವನ ಸಂಕಲನ ಮತ್ತು 622 ಗದ್ಯ ಕೃತಿ ಸೇರಿ ಒಟ್ಟು 716 ಪುಸ್ತಕಗಳಿವೆ.. ನಾನು ಒಟ್ಟು ಮೂರು ಕೃತಿ ಪ್ರಕಟಿಸಿದ್ದು, ಎರಡು ಅಪ್ರಕಟಿತ ನಾಟಕ ಮತ್ತು ಇನ್ನೊಂದು ಕವನ ಸಂಕಲನ ಬಿಡುಗಡೆಯ ತಯಾರಿಯಲ್ಲಿದೆ... ನೂರು ಪುಸ್ತಕ ಓದಿದವ ಒಂದು ಪುಸ್ತಕ ತಾನೇ ಬರೆಯಬಲ್ಲ...ಇದು ನನ್ನ ನಂಬಿಕೆ..ನಮಸ್ಕಾರ..



**ಹರೀಶ್ ಮಂಜೊಟ್ಟಿ**



**ಗಹನಾ**

Rise and Shine, I'm Gahana from 1 PU B6, here is little library which I have collected books like novels, about Indian force and kannada book.

ಪುಸ್ತಕಗಳಿಲ್ಲದ ಮನೆ ಕಿಟಕಿಗಳಿಲ್ಲದ ಮನೆ ಇದ್ದಂತೆ....

ನನಗೆ ಪುಸ್ತಕವೆಂದರೆ ತುಂಬಾ ಇಷ್ಟ... ಪುಸ್ತಕ ಕೈಯಲ್ಲಿ ಇದ್ದರೆ ಸಮಯ ಹೋದದ್ದೇ ತಿಳಿಯುವುದಿಲ್ಲ...

ಊಟ ತಿಂಡಿ ಯಾವುದರ ನೆನಪು ಇರುವುದಿಲ್ಲ.... ಪುಸ್ತಕದಿಂದ ಜ್ಞಾನ ಹೆಚ್ಚುವ ಜೊತೆಗೆ ಮನಸ್ಸಿನ ಶಾಂತಿ ಹೆಚ್ಚುತ್ತದೆ....




**ಶೋಭಾ**


**ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ| ಬಲ್ಲಿದರು ಇದ್ದು ಬಲವಿಲ್ಲ, ಸಾಹಿತ್ಯ ಎಲ್ಲರಿಗೆ ಇಲ್ಲ – ಸರ್ವಜ್ಞ ||**
ಓದುವಿಕೆ ಮಹತ್ವದ ಕುರಿತು 17ನೇ ಶತಮಾನದ ತ್ರಿಪದಿ ಬ್ರಹ್ಮ ಸರ್ವಜ್ಞನ ವಚನವೇ ಸಾಕ್ಷಿಯಾಗಿದೆ. ನಿಜ, ಇತ್ತೀಚೆಗೆ ಮೊಬೈಲ್ ಗೀಳನ್ನು ಅಬಾಲವೃದ್ಧರಾದಿಯಾಗಿ ಎಲ್ಲರೂ ಖುಷಿಯಿಂದ ಅನುಭವಿಸುತ್ತಿದ್ದಾರೆ. ಯಾರೂ ಅತ್ಯಂತ ಲಾಭ ಕೊಡುವ ಓದುವಿಕೆ ಬಗ್ಗೆ ವಿಚಾರವಾಡಲೊಲ್ಲರು. ಎಲ್ಲರೂ ಓಡುವ ಕುದುರೆಯಾಗ್ತಿದಾರೇ ವಿನಃ ಓದುವ ಕುದುರೆಯಾಗಲ್ಲ. ನಮ್ಮ ಮನಸ್ಸನ್ನ ಸಂತೋಷಪಡಿಸುವ ಅದ್ಭುತ ಸಾಧನಗಳೇ ಪುಸ್ತಕಗಳು. ಬೆಲೆಕಟ್ಟಲಾಗದ ಅಮೂಲ್ಯ ಸಂಪತ್ತೇ ಪುಸ್ತಕಗಳು. ನಮ್ಮ ಒಳಗಿನ ಮನವನ್ನ ನಾವು ಪ್ರತಿಕ್ಷಣ ಸಂತೋಷವಾಗಿ ಇಟ್ಟುಕೊಳ್ಳಲು ಸಂತೋಷ ಭರಿತ ಓದುವಿಕೆ ಮುಖ್ಯ. ಅದಕ್ಕೆ ಸಾಧನಗಳೇ "ಮನೆಯಲ್ಲಿಯ ಪುಸ್ತಕ ಮನೆ". ನಮ್ಮ ವಿರಾಮಕಾಲದ ಸದುಪಯೋಗಕ್ಕಾಗಿ, ಮನಸ್ಸಿನ ವರ್ಧನೆಗಾಗಿ, ತೇಜಸ್ಸಿನ ಮುಖಾರವಿಂದಕ್ಕಾಗಿ ನಮ್ಮ ಅತ್ಯುತ್ತಮ ಸ್ನೇಹಿತರೇ ಪುಸ್ತಕಗಳು. ಎಲ್ಲರ ಮನೆಯೂ ಸ್ವಯಂ ಗ್ರಂಥಾಲಯವಾಗಿ ಮಾರ್ಪಟ್ಟರೆ ನಮ್ಮ ಮಕ್ಕಳನ್ನ ಸನ್ಮಾರ್ಗದಲ್ಲಿ ನಡೆಸಲು ಬಹಳ ಅನುಕೂಲ. ಹೀಗಾಗಿಯೇ ನಮ್ಮ ಮನೆಯ "ಪುಸ್ತಕ ಮನೆಯಲ್ಲಿ" ಬೆಲೆಕಟ್ಟಲಾರದ 1200 ಪುಸ್ತಕಗಳ ಭಂಡಾರವಿದೆ. ಎಲ್ಲರಿಗೂ ನಮಸ್ತೆ.



**ಮಾಲತೇಶ ಎಸ್. ನಾಡಿಗೇರ**
ಶಿಕ್ಷಕರು,
ಸರಕಾರಿ ಪ್ರೌಢಶಾಲೆ, ಹಾವೇರಿ




## ಹೆಚ್.ಕೆ .ಎಸ್ - ಮಹಿಳಾ ಸ್ವರಕ್ಷಾ ಪ್ರಾತ್ಯಕ್ಷಿಕೆ




**ಹಾಸನ:** ಮಹಿಳಾ ಸ್ವರಕ್ಷಾ ಪ್ರಾತ್ಯಕ್ಷಿಕೆಯನ್ನು ಕಾರ್ತಿಕ್ ಎಸ್. ಕಟೀಲು ಮತ್ತು ಶೋಭಲತಾ ಸುರೇಶ್‌ರವರು ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಕಾರ್ಕಳ ಇದರ ಶೈಕ್ಷಣಿಕ ಸಹಭಾಗಿತ್ವದ ಹೆಚ್.ಕೆ.ಎಸ್ ಪಿಯು ಕಾಲೇಜ್ ಹಾಸನದಲ್ಲಿ ನಡೆಸಿಕೊಟ್ಟರು.

## ಪರೀಕ್ಷೆ ಒತ್ತಡ ನಿವಾರಣಾ ಕಾರ್ಯಾಗಾರ




**ಕಾರ್ಕಳ:** ಕಾರ್ಕಳದ ಕ್ರಿಯೇಟಿವ್ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳಿಗೆ ಒತ್ತಡಮುಕ್ತ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ಅಂತರಾಷ್ಟ್ರೀಯ JC ತರಬೇತುದಾರರಾದ ತನುಜಾ ಮಾಬೆನ್ ತಿಳಿಸಿದರು.

## ಪಾಲಕ– ಶಿಕ್ಷಕ ಸಭೆ




ಉಡುಪಿ: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಸಾಧನೆ ಮತ್ತು ಸಂದೇಹಗಳನ್ನು ನಿವಾರಿಸುವ ಸಲುವಾಗಿ ವಿದ್ಯಾರ್ಥಿಗಳ ಪಾಲಕರೊಂದಿಗೆ ಒಂದು ದಿನದ ಸಭೆಯನ್ನು ನಡೆಸಲಾಯಿತು. ಸಂಸ್ಥೆಯ ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೋ, ಸಹ ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿ ಉಪಸ್ಥಿತರಿದ್ದರು.

### ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನಲ್ಲಿ

## ಎನ್.ಎಸ್.ಎಸ್ ನೂತನ ಘಟಕದ ಉದ್ಘಾಟನೆ



**ಕಾರ್ಕಳ:** ಎನ್.ಎಸ್.ಎಸ್ ರಾಜ್ಯ ಸಂಯೋಜನಾಧಿಕಾರಿ ಡಾ. ಗುಬ್ಬಿಗೂಡು ರಮೇಶ್ ಸಿ.ಜಿ., ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಉಪನಿರ್ದೇಶಕರಾದ ರಾಜು, ಮಾನ್ಯತೆ ಮತ್ತು ಅನುದಾನ ವಿಭಾಗದ ಸಹಾಯಕ ನಿರ್ದೇಶಕರಾದ ಮೊಹಮ್ಮದ್ ಜಿಯಾಉಲ್ಲಾಖಾನ್, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಸಹಾಯಕ ನಿರ್ದೇಶಕರಾದ ಆನಂದ ಪಿ., ಉಡುಪಿ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಉಪನಿರ್ದೇಶಕರಾದ ಮಾರುತಿ, ರಾಷ್ಟ್ರೀಯ ಸೇವಾ ಯೋಜನೆಯ ಪ್ರಾಂತೀಯ ವಿಭಾಗಾಧಿಕಾರಿ ಶ್ರೀಮತಿ ಸವಿತಾ ಎರ್ಮಾಳ್, ದ.ಕ ಜಿಲ್ಲಾ ಉಪನಿರ್ದೇಶಕರಾದ ಸಿ.ಡಿ.ಜಯಣ್ಣ, ಕ್ರೀಡಾ ನಿರ್ದೇಶಕರಾದ ಪ್ರೇಮನಾಥ ಶೆಟ್ಟಿ, ಗೋಪಾಲಕೃಷ್ಣ, ಕ್ರಿಯೇಟಿವ್ ಪ.ಪೂ ಕಾಲೇಜಿನ ಪ್ರಾಂಶುಪಾಲರಾದ ವಿದ್ವಾನ್ ಗಣಪತಿ ಭಟ್, ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ–ಸಂಸ್ಥಾಪಕರಾದ ಡಾ.ಬಿ.ಗಣನಾಥ ಶೆಟ್ಟಿ ಅಧ್ಯಕ್ಷತೆಯಲ್ಲಿ "ರಾಷ್ಟ್ರೀಯ ಸೇವಾ ಯೋಜನೆ"ಯ ನೂತನ ಘಟಕ ಉದ್ಘಾಟನೆಗೊಂಡಿತು.

## 'ಕ್ರಿಯೇಟಿವ್ ಉನ್ನತಿ'



**ಕಾರ್ಕಳ:** ನಾನು ಎಂಬುದು ವೈಯಕ್ತಿಕ. ಆದ್ದರಿಂದ ಉನ್ನತಿಗೇರುವುದು, ಹೆಸರು ಗಳಿಸುವುದು ಸಂಸ್ಥೆಯಿಂದಲೇ ಹೊರತು ವ್ಯಕ್ತಿಯಿಂದಲ್ಲ. ವಿಭಿನ್ನವಾಗಿ ಯೋಚಿಸುವುದರಿಂದ ಕ್ರಿಯಾತ್ಮಕ ರಚನೆಗಳು ಹೊರಹೊಮ್ಮುತ್ತವೆ. ಪ್ರಯತ್ನಪೂರ್ವಕವಾದ ಕಾರ್ಯ ಖಂಡಿತ ಯಶಸ್ಸನ್ನು ತಂದುಕೊಡುತ್ತದೆ. ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ ಕಾರ್ಯದಲ್ಲಿ ಹೊಸತನ್ನು ಹುಡುಕಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಮಾರ್ಗದರ್ಶನ ನೀಡಬೇಕಾದದ್ದು ಉಪನ್ಯಾಸಕರ ಕರ್ತವ್ಯವಾಗಬೇಕು ಎಂದು ರಾಮಕುಂಜೇಶ್ವರ ಪ್ರೌಢಶಾಲೆಯ ಶಿಕ್ಷಕ, ಜೆ.ಸಿ.ಐ.ನ ತರಬೇತುದಾರ ಸತೀಶ್ ಭಟ್, ಪುತ್ತೂರು ಇವರು ಕಾರ್ಕಳ ಕ್ರಿಯೇಟಿವ್ ಕಾಲೇಜಿನಲ್ಲಿ ನಡೆದ "ಕ್ರಿಯೇಟಿವ್ ಉನ್ನತಿ" ಉಪನ್ಯಾಸಕರಿಗೆ ಪುನಶ್ಚೇತನ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

## ಸ್ವಾಸ್ಥ್ಯ ಸಂಕಲ್ಪ ಮಾಹಿತಿ ಕಾರ್ಯಕ್ರಮ



**ಕಾರ್ಕಳ:** ಕ್ರಿಯೇಟಿವ್ ಪ.ಪೂ ಕಾಲೇಜು ಕಾರ್ಕಳ ಇದರ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಜನಜಾಗೃತಿ ವೇದಿಕೆ ಕಾರ್ಕಳ ತಾಲೂಕು ಇವುಗಳ ಸಂಯುಕ್ತ ಆಶ್ರಯದಲ್ಲಿ ಸ್ವಾಸ್ಥ್ಯ ಸಂಕಲ್ಪ ಮಾಹಿತಿ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಉದಯ ಕುಮಾರ್ ಹೆಗ್ಡೆ ಮತ್ತು ಸಂತೋಷ್ ಶೆಟ್ಟಿಯವರು ಮಾತನಾಡಿದರು. ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶಿಬಿರಾಧಿಕಾರಿ ನಂದಕುಮಾರ್ ಇವರು ಮದ್ಯಪಾನ, ತಂಬಾಕು, ಡ್ರಗ್ಸ್‌ಗಳು ನಮ್ಮ ಜೀವನವನ್ನು ಹೇಗೆ ಹಾಳು ಮಾಡುತ್ತವೆ ಹಾಗೂ ಅವುಗಳ ದುಷ್ಪರಿಣಾಮಗಳ ಬಗ್ಗೆ ಸವಿಸ್ತಾರವಾದ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿಯವರು ಮಾತನಾಡಿ ಯುವ ಪೀಳಿಗೆಯ ಮೊದಲ ಶತ್ರು ಮಾದಕ ವಸ್ತುಗಳು, ಇದನ್ನು ತ್ಯಜಿಸಿದರೆ ಜಗತ್ತನ್ನೇ ಜಯಿಸಬಹುದೆಂದರು.

**ಕಾವ್ಯೋಕ್ತಿ** | ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? – ಕುವೆಂಪು



## ಕ್ರಿಯೇಟಿವ್ ಪದವಿ ಪೂರ್ವ ಕಾಲೇಜಿನ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ

**ಕಾರ್ಕಳ:** ದಿನಾಂಕ : 12.10.2023 ರಿಂದ 18.10.2023 ರ ವರೆಗೆ ಕ್ರಿಯೇಟಿವ್ ಪ.ಪೂ ಕಾಲೇಜಿನ ಎನ್.ಎಸ್.ಎಸ್. ಘಟಕದ ವಾರ್ಷಿಕ ವಿಶೇಷ ಶಿಬಿರವನ್ನು ಮಾನ್ಯ ಶಾಸಕರಾದ ವಿ. ಸುನಿಲ್ ಕುಮಾರ್ ಉದ್ಘಾಟಿಸಿದರು. ಇವರೊಂದಿಗೆ ಎನ್.ಎಸ್.ಎಸ್. ಘಟಕದ ಮಂಗಳೂರು ವಿಭಾಗದ ಪ್ರಾಂತೀಯ ವಿಭಾಗಾಧಿಕಾರಿಗಳಾದ ಸವಿತಾ ಎರ್ಮಾಳ್, ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕರಾದ ವಿದ್ವಾನ್ ಗಣಪತಿ ಭಟ್, ಡಾ. ಬಿ ಗಣನಾಥ ಶೆಟ್ಟಿ ಹಾಗೂ ಊರ ಗಣ್ಯರಾದ ಸಂತೋಷ ಶೆಟ್ಟಿ, ಮಹಾವೀರ ಕಟ್ಟಡ, ಸರ್ವೋತ್ತಮ ಕಡಂಬ ಮತ್ತಿತರಿದ್ದರು.

ಶಿಬಿರದ ದಿನ ಎನ್.ಎಸ್.ಎಸ್. ಧ್ವಜಾರೋಹಣ ಕಾರ್ಯಕ್ರಮವನ್ನು ಜಗದೀಶ್ ಕಡಂಬರವರು ನೆರವೇರಿಸಿ ಶುಭ ಹಾರೈಸುವುದರೊಂದಿಗೆ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು ಹೆಚ್ಚಿಸುವ ಶ್ರಮದಾನ ಕಾರ್ಯ ನೆರವೇರಿತು. ಮಧ್ಯಾಹ್ನ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಸುಜೇಂದ್ರ ಕಾರ್ಲ ಮಕ್ಕಳಿಗೆ ಕರಕುಶಲ ಪ್ರಾತ್ಯಕ್ಷತೆ ನೀಡಿದರು. ಮುಖ್ಯ ಅತಿಥಿಗಳಾಗಿ ಮೋಹನ್ ಪಡಿವಾಳ, ಎಂ ಕೃಷ್ಣ ಶೆಟ್ಟಿ, ಚಂದ್ರಶೇಖರ ಹೆಗ್ಡೆ ಮತ್ತಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಸಹಭಾಗಿತ್ವದ ಸಂಸ್ಥೆ ತ್ರಿಶಾ ಪ.ಪೂ ಕಾಲೇಜು, ಉಡುಪಿ ಇಲ್ಲಿನ ಪ್ರಾಂಶುಪಾಲರಾದ ಸ್ಟ್ಯಾನಿ ಲೋಬೋ ರವರು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡುತ್ತಾ,




ಎನ್.ಎಸ್.ಎಸ್. ದೇಶ ಕಟ್ಟುತ್ತದೆ, ಎನ್.ಸಿ.ಸಿ. ದೇಶ ರಕ್ಷಿಸುತ್ತದೆ ಎಂದರು. ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹರಿಶ್ಚಂದ್ರ ಕುಲಾಲ್, ಸಹಸಂಸ್ಥಾಪಕರಾದ ಅಮೃತ್ ರೈಯವರು ಜ್ಯೋತಿ ಪ್ರಜ್ವಲಿಸುವ ಮುಖಾಂತರ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಕ್ರಿಯೇಟಿವ್ ಯಕ್ಷಾರಾಧನವ್ ಕಲಾವಿದರಿಂದ ಯಕ್ಷಗಾನ ನಡೆಯಿತು. ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಉಮೇಶ್, ಶಿಬಿರಾಧಿಕಾರಿಗಳು, ಊರ ಮಹನೀಯರು ಉಪಸ್ಥಿತರಿದ್ದರು.

## ಗ್ರೀನ್ ಸೋಲ್ ಹಾಗೂ ಕ್ರಿಯೇಟಿವ್ ವಿದ್ಯಾ ಸಂಸ್ಥೆಯ ಸಹಯೋಗದಲ್ಲಿ
# ಬೃಹತ್ ಪಾದರಕ್ಷೆ ಸಂಗ್ರಹ ಅಭಿಯಾನ




**ಕಾರ್ಕಳ:** ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ ಮತ್ತು "ಗ್ರೀನ್ ಸೋಲ್" ಸಂಸ್ಥೆಯ ಸಹಕಾರದೊಂದಿಗೆ ಸಾರ್ವಜನಿಕರಿಂದ ಬಳಸಿದ ಪಾದರಕ್ಷೆಗಳನ್ನು ಸಂಗ್ರಹಿಸಿ ಅದನ್ನು ಉನ್ನತ ತಂತ್ರಜ್ಞಾನದ ಮೂಲಕ ಮರುಬಳಕೆ ಮಾಡಿ ಶಾಲೆಯ ಬಡಮಕ್ಕಳಿಗೆ ವಿತರಿಸುವ ವಿನೂತನ ಮತ್ತು ಮಾದರಿ ಕಾರ್ಯಕ್ರಮ ನವೆಂಬರ್ 29 ರಂದು ನಡೆಯಿತು. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡ ಅತ್ಯಂತ ಬಡತನ ಹೊಂದಿದ ಶಾಲೆಯ ಮಕ್ಕಳಿಗೆ ಪಾದರಕ್ಷೆಯನ್ನು ಒದಗಿಸುವ ಅಭಿಯಾನ "ಗ್ರೀನ್ ಸೋಲ್" ಎಂಬ ಸಂಸ್ಥೆಯೊಂದಿಗೆ ಸೇರಿ ನಡೆಸಲಾಗುತ್ತಿದೆ. ಅವಿನಾಶ್ ಕಾಮತ್‌ರವರ ಕನಸಿನ ಯೋಜನೆಗೆ ಕ್ರಿಯೇಟಿವ್ ವಿದ್ಯಾ ಸಂಸ್ಥೆಯೂ ಕೈ ಜೋಡಿಸಿದ್ದು ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹಸಂಸ್ಥಾಪಕರಾದ ಅಶ್ವತ್ ಎಸ್.ಎಲ್ ಭಾಗಿಯಾಗಿ ಮಾತನಾಡಿ ಗ್ರಾಮೀಣ ಪ್ರದೇಶದ ಕನಿಷ್ಟ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳಲಾಗದ ವಿದ್ಯಾರ್ಥಿಗಳಿಗೆ ಈ ಯೋಜನೆ ವರದಾನವಾಗಲಿದೆ. "ನಡಿಗೆ" ಯೋಜನೆಯಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಕಾರ್ಕಳ ಪರಿಸರದಿಂದ ಒಂದು ಸಾವಿರಕ್ಕೂ ಅಧಿಕ ಪಾದರಕ್ಷೆಗಳ ಜೊತೆಯನ್ನು "ಗ್ರೀನ್ ಸೋಲ್" ಸಂಸ್ಥೆಗೆ ಹಸ್ತಾಂತರಿಸಲಾಯಿತು.

## ಹಿರ್ಗಾನ ಬೆಂಗಾಲ್ ಕೃಷಿ ಭೂಮಿಯಲ್ಲಿ ಕ್ರಿಯೇಟಿವ್ ಕಾಲೇಜಿನ
# ವಾಣಿಜ್ಯ ವಿದ್ಯಾರ್ಥಿಗಳಿಂದ ಭತ್ತದ ನಾಟಿ ಚಟುವಟಿಕೆ

**ಕಾರ್ಕಳ:** ವಿದ್ಯಾರ್ಥಿಗಳಿಗೆ ಕೃಷಿಯ ಕುರಿತು ಆಸಕ್ತಿ ಬೆಳೆಸುವ ಮತ್ತು ಅನ್ನದಾತನ ಕಷ್ಟವನ್ನು ಅರಿಯುವ ಕಾರ್ಯಕ್ರಮದ ಅಂಗವಾಗಿ ಕ್ರಿಯೇಟಿವ್ ಕಾಲೇಜ್‌ನ ವಾಣಿಜ್ಯ ವಿದ್ಯಾರ್ಥಿಗಳಿಗೆ ಭತ್ತದ ನಾಟಿ ನೆಡುವ ಕಾರ್ಯಕ್ರಮ ಹಿರ್ಗಾನದ ಬೆಂಗಾಲ್‌ನ ಕೃಷಿ ಭೂಮಿಯಲ್ಲಿ ನಡೆಯಿತು. ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕವಾಗಿ ನೇಜಿ ನೆಡುವ ವಿಧಾನವನ್ನು ತಿಳಿಸಲಾಯಿತು. ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಂಡು ಮಾತನಾಡಿದ ಕ್ರಿಯೇಟಿವ್‌ನ ಸಂಸ್ಥಾಪಕರಾದ ಡಾ. ಗಣನಾಥ ಶೆಟ್ಟಿಯವರು ಇಂದಿನ ಕಾಲಘಟ್ಟದಲ್ಲಿ ಕೃಷಿ ಚಟುವಟಿಕೆಗಳು ಕಡಿಮೆಯಾಗುತ್ತಿವೆ. ಅನ್ನವನ್ನು ಗಳಿಸಬೇಕಾದರೆ ಅದರ ಹಿಂದೆ ಅಪಾರ ಪರಿಶ್ರಮವಿದೆ. ನಾವೆಲ್ಲರೂ ರೈತರ ಕಷ್ಟವನ್ನು, ಒಕ್ಕಲುತನದ ಆನಂದವನ್ನು ಪಡೆಯಬೇಕು ಎಂದು ಕರೆ ನೀಡಿದರು.



# ಹೆಚ್.ಕೆ.ಎಸ್ ನಲ್ಲಿ 'ಗುರುದೇವೋಭವ' ಕಾರ್ಯಕ್ರಮ




**ಹಾಸನ:** ಹಾಸನದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಹೆಚ್.ಕೆ.ಎಸ್ ಪ.ಪೂ ಕಾಲೇಜು, ಇಲ್ಲಿ ಶಿಕ್ಷಕರ ದಿನಾಚರಣೆಯ ಪ್ರಯುಕ್ತ 'ಗುರುದೇವೋಭವ' ಎಂಬ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ, ಬೇಲೂರು ವಿಧಾನ ಸಭಾ ಕ್ಷೇತ್ರದ ಶಾಸಕರಾದ ಹೆಚ್.ಕೆ. ಸುರೇಶ್ ಅವರು ವಿದ್ಯಾರ್ಥಿಗಳ ಜೀವನ ರೂಪಿಸುವಲ್ಲಿ ಶಿಕ್ಷಕರ ಪಾತ್ರವನ್ನು ವಿವರಿಸುತ್ತಾ ಭವಿಷ್ಯದ ದೇಶವನ್ನು ಕಟ್ಟುವಲ್ಲಿ ಶಿಕ್ಷಕರ ಕೊಡುಗೆ ಅದಮ್ಯ ಎಂದು ಅಭಿಪ್ರಾಯಪಟ್ಟರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳ ಇದರ ಸಹ ಸಂಸ್ಥಾಪಕರಾದ ಅಶ್ವತ್ ಎಸ್.ಎಲ್ ಇವರು ಶಿಕ್ಷಕರಾದವರು ಆದರ್ಶ ಗುಣಗಳನ್ನು ಪಾಲಿಸಿ ಮಕ್ಕಳಿಗೆ ಮಾದರಿಯಾಗುವುದರ ಮೂಲಕ ನೈತಿಕ ಶಿಕ್ಷಣ ಬಿತ್ತುವಂತೆ ಸಲಹೆ ಇತ್ತರು. ಮುಖ್ಯ ಅತಿಥಿಗಳಾಗಿ ಆಗಮಿಸಿ ಸನ್ಮಾನವನ್ನು ಸ್ವೀಕರಿಸಿದ ಪೋದಾರ್ ಇಂಟರ್ನ್ಯಾಷನಲ್ ಸ್ಕೂಲ್‌ನ ಪ್ರಾಂಶುಪಾಲರಾದ ಜೋಷುವ ಪ್ರೇಮ್ ಸ್ವರೂಪ್, ಮಾಡೆಲ್ ಇಂಗ್ಲೀಷ್ ಸ್ಕೂಲ್ ಜಾವಗಲ್ ಇದರ ಕಾರ್ಯದರ್ಶಿಗಳಾದ ಡಾ. ವಿನಾಯಕ ಸಿಂಡಿಗೆರೆ ಮತ್ತು ರಾಧಾಕೃಷ್ಣ ವಿದ್ಯಾ ಶಾಲೆ, ಚನ್ನರಾಯ ಪಟ್ಟಣ ಇಲ್ಲಿನ ಪ್ರಾಂಶುಪಾಲರಾದ ಕಾರ್ತಿಕ್ ಸೆಲ್ವರಾಜ್ ಇವರುಗಳು ವಿದ್ಯಾರ್ಥಿಗಳಿಗೆ ಶಿಕ್ಷಕರ ದಿನದ ಮಹತ್ವವನ್ನು ತಿಳಿಸುತ್ತಾ ಅಭಿನಂದನಾ ನುಡಿಗಳನ್ನಾಡಿದರು. ಪ್ರಾಂಶುಪಾಲರಾದ ವಿಮಲ್ ರಾಜ್ ಜಿ. ಇವರು ಮಾತನಾಡುತ್ತಾ ವಿದ್ಯಾರ್ಥಿಗಳಲ್ಲಿ ಸುಪ್ತ ಪ್ರತಿಭೆಯನ್ನು ಹೊರ ತರುವಲ್ಲಿ ಶಿಕ್ಷಕರ ಪಾತ್ರವನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಕಾಲೇಜಿನ ಉಪ ಪ್ರಾಂಶುಪಾಲರಾದ ಆದಿತ್ಯ ವಟಿ .ಕೆ ಮತ್ತು ಜೀವಶಾಸ್ತ್ರ ಉಪನ್ಯಾಸಕರಾದ ರಂಜಿತ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳ ಇದರ ಸಹ ಸಂಸ್ಥಾಪಕರಾದ ಗಣಪತಿ ಭಟ್, ಇವರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಿ ಅಭಿನಂದಿಸಿದರು.

## ಹೆಚ್.ಕೆ.ಎಸ್ ಪ.ಪೂ ಕಾಲೇಜಿನಲ್ಲಿ
# ಹಿಂದಿ ದಿವಸ್ ಆಚರಣೆ




**ಹಾಸನ:** ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನ, ಕಾರ್ಕಳ ಇದರ ಶೈಕ್ಷಣಿಕ ಸಹಭಾಗಿತ್ವದ ಹಾಸನದ ಹೆಚ್.ಕೆ.ಎಸ್ ಪ.ಪೂ ಕಾಲೇಜು, ಇಲ್ಲಿ ಹಿಂದಿ ಪರ್ವ ದಿನವನ್ನು ಆಚರಿಸಲಾಯಿತು.

## ಕಾರ್ಕಳ ಕ್ರಿಯೇಟಿವ್ ವಿದ್ಯಾಸಂಸ್ಥೆಯಲ್ಲಿ
# ದ್ವಿತೀಯ ವರ್ಷದ ಗಣೇಶೋತ್ಸವ



**ಕಾರ್ಕಳ:** ಕ್ರಿಯೇಟಿವ್ ವಿದ್ಯಾಸಂಸ್ಥೆಯಲ್ಲಿ ಗಣೇಶ ಚತುರ್ಥಿ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

## ಹೆಚ್.ಕೆ.ಎಸ್ ಪ.ಪೂ ಕಾಲೇಜಿನಲ್ಲಿ
# ಗಾಂಧಿ ಜಯಂತಿ ಆಚರಣೆ



**ಹಾಸನ:** ಹೆಚ್.ಕೆ.ಎಸ್ ಪ.ಪೂ ಕಾಲೇಜು, ಹಾಸನ ಇಲ್ಲಿ ಮಹಾತ್ಮ ಗಾಂಧೀಜಿಯವರ 154ನೇ ಜನ್ಮದಿನಾಚರಣೆಯನ್ನು ಆಚರಿಸುವುದರೊಂದಿಗೆ ಭಾರತ ದೇಶದ ಎರಡನೇ ಪ್ರಧಾನ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಮತ್ತು ಕಸ್ತೂರ ಬಾ ರವರ ಜನ್ಮದಿನಾಚರಣೆಯನ್ನು ಕೂಡ ಆಚರಿಸಲಾಯಿತು.

## ಹೆಚ್.ಕೆ.ಎಸ್‌ನಲ್ಲಿ
# ಗಮಕ ಪ್ರಾತ್ಯಕ್ಷಿಕೆ



**ಹಾಸನ:** ಹಾಸನದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಹೆಚ್.ಕೆ.ಎಸ್ ಪ.ಪೂ ಕಾಲೇಜು ಹಾಸನ ಇಲ್ಲಿ ಗಮಕ ಶ್ರಾವಣ ಹಾಗೂ ಪದ್ಯಾಧಾರಿತ ಗಮಕ ಪ್ರಾತ್ಯಕ್ಷಿಕೆ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಕರ್ನಾಟಕ ಕಲಾಶ್ರೀ ಗಣೇಶ ಉಡುಪರವರು ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯದ ಲಕ್ಷ್ಮೀಶ ಕವಿಯ ಜೈಮಿನಿ ಭಾರತ ಕಾವ್ಯದ 'ಹಲುಬಿದಳ್ ಕಲ್ಮರಂ ಕರಗುವಂತೆ' ಎಂಬ ಕಾವ್ಯ ಭಾಗವನ್ನು ಗಮಕದ ಮೂಲಕ ಗಾಯನ ಮಾಡಿದರೆ, ವಿದ್ವಾನ್ ಜಿ.ಎಸ್. ಮಂಜುನಾಥ್‌ರವರು ವ್ಯಾಖ್ಯಾನಿಸಿದರು. ವೇದಿಕೆಯಲ್ಲಿ ಪ್ರಾಂಶುಪಾಲರಾದ ವಿಮಲ್ ರಾಜ್ ಜಿ. ಉಪಪ್ರಾಂಶುಪಾಲರಾದ ಪ್ರವೀಣ್ ಎ. ಉಪಸ್ಥಿತರಿದ್ದರು.

ಕಾವ್ಯೋಕ್ತಿ | ಇಲ್ಲಿ ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ ಯಾವುದೂ ಯಃಕಶ್ಚಿತವಲ್ಲ ! – ಕುವೆಂಪು



## ಸ್ಟೂಡೆಂಟ್ಸ್ ಕಾರ್ನರ್

# ನಮ್ಮ ತುಳುನಾಡು



ಹಸಿರಿನಿಂದ ಕೂಡಿದ ಪರಿಸರ, ಅಬ್ಬರಿಸಿ ಬರುವ ಕಡಲು, ಯಕ್ಷಗಾನ, ಭೂತರಾಧನೆ, ಹುಲಿವೇಷ, ತುಳುಭಾಷೆಗಳಿಂದ ಮಿರುಗುತ್ತಿದೆ ನಮ್ಮ ಭವ್ಯ ತುಳುನಾಡು. ಉತ್ತರದ ಭದ್ರಗಿರಿ ದಕ್ಷಿಣದ ಚಂದ್ರಗಿರಿ ತನಕ, ಪೂರ್ವದ ಘಟ್ಟದಿಂದ ಪಶ್ಚಿಮ ಕಡಲಿನ ತನಕ ಒಳ್ಳೆ ಮನಸ್ಸಿನ ಜನರು ಇರುವಂತಹ ಚಂದದ ನಾಡು ನಮ್ಮ ಈ ತುಳುನಾಡು, ಹಾಗೆ ಚೆಂದದ ಭಾಷೆ ನಮ್ಮ ತುಳುಭಾಷೆ. ಪರಶುರಾಮನ ಸೃಷ್ಟಿಯೆನಿಸಿರುವ ತುಳು ನಾಡಿನ ಇತಿಹಾಸ ಸಂಸ್ಕೃತಿ, ಪರಂಪರೆ ಎಲ್ಲವೂ ಪಶ್ಚಿಮದ ಸಮುದ್ರದಂತೆ ವಿಸ್ತಾರ ಮತ್ತು ಆಳ. ಅತ್ಯಂತ ವೈವಿಧ್ಯಮಯವೂ, ವೈಶಿಷ್ಟ್ಯ ಪೂರ್ಣವೂ ಆಗಿರುವ ತುಳುವ ಸಂಸ್ಕೃತಿಯ ಮಡಿಲಿನಲ್ಲಿ ಅನಾವರಣಗೊಳ್ಳುವ ಅದೆಷ್ಟೋ ವಿಚಾರಗಳು ಇವೆ.

ತುಳುನಾಡಿನ ಸಂಪ್ರದಾಯ ಹೇಳುವುದಾದರೆ ತುಳುವಿನವರು ಯಾವುದಕ್ಕೂ ಕಮ್ಮಿ ಇಲ್ಲ. ಹಾಗೆಯೇ ತುಳುನಾಡಿನಲ್ಲಿ ನಡೆಯುವ ಭೂತಕೋಲ, ಯಕ್ಷಗಾನ, ಕೋಳಿ ಅಂಕ, ಕಂಬಳ ಹೀಗೆ ಒಂದೊಂದೆ ಆಚರಣೆಗಳು ಇರುತ್ತವೆ. ತುಳುನಾಡಿನ ಇತಿಹಾಸ ತಿಳಿದವರು ತುಂಬಾ ಕಡಿಮೆ. ಭೂತರಾಧನೆ ನೇಮದ ಆಚರಣೆಗಳ ಮೂಲಕ ಕಂಡು ಬರುತ್ತದೆ. ತುಳುನಾಡಿನ ಜನರು ಭೂತಗಳನ್ನು ದೈವಿಕ ಶಕ್ತಿಗಳೆಂದು ನಂಬಿ ಆರಾಧಿಸುತ್ತಾರೆ. ತುಳು ಸಂಸ್ಕೃತಿಯಲ್ಲಿ ಯಕ್ಷಗಾನ, ಢಕ್ಕೆಬಲಿ (ನಾಗದರ್ಶನ) ಬೇರೆ ರೀತಿಯ ಹರಕೆಗಳನ್ನು ಕಾಣಬಹುದು. ಯಕ್ಷಗಾನ ಪ್ರಸಿದ್ಧವಾದ ಒಂದು ತುಳುನಾಡಿನ ಗಂಡು ಕಲೆ. ಯಕ್ಷಗಾನ ತುಳು ಸಂಸ್ಕೃತಿಯ ಹೆಮ್ಮೆಯ ಅಂಗವಾಗಿದೆ.

ತುಳುನಾಡಿನಲ್ಲಿ ಮಲ್ಪೆ, ಶ್ರೀ ಕೃಷ್ಣ ಮಠ, ಕಾಪು, ಮೂಕಾಂಬಿಕ ದೇವಸ್ಥಾನ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಧರ್ಮಸ್ಥಳ, ಮುಂತಾದ ಪ್ರವಾಸಿ ತಾಣಗಳನ್ನು ಹೊಂದಿದೆ. ತುಳುನಾಡು ಭಾರತದ ಪಶ್ಚಿಮ ಕರಾವಳಿಯಲ್ಲಿ ಅತ್ಯಂತ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿದೆ. ತುಳುನಾಡಿನಲ್ಲಿ ನೂರಾರು ವೃತ್ತಿಪರ ಕಾಲೇಜುಗಳಿವೆ. ಭಾರತದಾದ್ಯಂತ ಮತ್ತು ವಿದೇಶಗಳಲ್ಲಿರುವ ಸಾವಿರಾರು ವಿದ್ಯಾರ್ಥಿಗಳು ಈ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಾರೆ. ಇನ್ನು ತುಳುವರ ಆಹಾರ ಕ್ರಮದ ಬಗ್ಗೆ ಹೇಳ ಬೇಕಾದರೆ ನಿರ್ದೋಸೆ, ಪತ್ರೊಡೆ, ಹಲಸಿನಹಣ್ಣಿನ ಕಡುಬು, ಬಾಳೆಎಲೆಯ ಕಡುಬು, ಅರಶಿನೆಲೆ ಕಡುಬು ಇವುಗಳೆಲ್ಲ ತುಳುನಾಡಿನ ತಿಂಡಿಗಳು. ಹಾಗೆಯೇ ಉಡುಪಿ ಪಾಕಪದ್ಧತಿಯು ದಕ್ಷಿಣ ಭಾರತದಾದ್ಯಂತ ಜನಪ್ರಿಯವಾಗಿದೆ, ಮಖ್ಯವಾಗಿ ಉಡುಪಿ ಉಪಾಹಾರ ಮಂದಿರಗಳು ಸಸ್ಯಾಹಾರಿಗಳಾಗಿವೆ. ದಕ್ಷಿಣ ಭಾರತದ ಹೊರತಾಗಿ, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರಸಿದ್ಧ ಉಡುಪಿ ಉಪಾಹಾರ ಮಂದಿರಗಳಿವೆ.

ಹೀಗೆ ತುಳುನಾಡಿನ ವಿಶೇಷತೆಗಳನ್ನು ಹೇಳುತ್ತಾ ಸಾಗಿದರೆ ಪದಗಳೇ ಸಾಲದು. ಆದುದರಿಂದ ತುಳುನಾಡಿನ ಜನರ ಭಾಷೆ, ಆಚರಣೆ ಹಾಗೂ ವಿಚಾರಗಳನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ. ಏನೇ ಆಗಲಿ ನಮ್ಮ ಹೆಮ್ಮೆಯ ನಾಡು ತುಳುನಾಡು.....



ಶ್ರೇಯಾ
ದ್ವಿತಿಯ ಪಿಯುಸಿ ವಾಣಿಜ್ಯ ವಿಭಾಗ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ

# ಗುರು



ಅಕ್ಷರ ಕಲಿಸಿದವನಾತ
ಅಕ್ಕರದ ಬರಹಕ್ಕೆ ಕಾರಣನಾತ
ಅವನ ಜ್ಞಾನದ ಮುಂದೆ
ನಾವೆಲ್ಲ ತೃಣಕ್ಕೆ ಸಮಾನ

ಅವನ ಜ್ಞಾನದ ಮುಂದೆ
ಆ ಬ್ರಹ್ಮಾಸ್ತ್ರವೂ ಹಿಂಜರಿದೀತು
ಅಜ್ಞಾನದ ಲೋಕವನ್ನು
ಸರಿಪಡಿಸುವವನಾತ

ಜ್ಞಾನದ ಬೆಳಕಿನೊಂದಿಗೆ
ಅಜ್ಞಾನದ ಕತ್ತಲನ್ನು ಹೋಗಲಾಡಿಸುವವನಾತ
ಅವನಾದರೆ ಎಲ್ಲರಿಗೂ ಮಾರ್ಗದರ್ಶಿ
ನಮ್ಮ ಲೋಕವಾಗುವುದು ಜ್ಞಾನಭರಿತ

ಮುಡಿಪಿಟ್ಟಿರುವನು ಆತನ ಜೀವನವನ್ನು
ಜ್ಞಾನದ ದೇಣಿಗೆಯ ಸಂಕೇತವಾಗಿ
ಅಜ್ಞಾನವೆಂಬ ಕತ್ತಲಿಗೆ
ಅಂತ್ಯ ಹಾಡುವವನಾತ



ಪನ್ವಿತ್ ಜಿ ಎನ್
ದ್ವಿತೀಯ ಪಿಯುಸಿ ಪಿಸಿಎಂಬಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ

## ವೀಕ್ಷನರಿ


# ಸ್ವರ್ಣ ಮಂದಿರ ದರ್ಶನ

ಭಾರತ-ಪಾಕಿಸ್ತಾನದ ಗಡಿ ಸಮೀಪವಿರುವ ಪಟ್ಟಣ ಅಮೃತಸರ. ಇದು ಭಾರತದ ಸುಪ್ರಸಿದ್ಧ ಪ್ರವಾಸಿ ಕೇಂದ್ರ. ಸಿಕ್ಖ್ ಧರ್ಮೀಯರ ಧಾರ್ಮಿಕ ತೀರ್ಥಕ್ಷೇತ್ರ. ಬ್ರಿಟಿಷ್ ಸರಕಾರ ಭಾರತೀಯರ ಮೇಲೆ ಜಲಿಯಾನ್ ವಾಲ್‌ಬಾಗ್‌ನ ನರಮೇಧ ನಡೆಸಿದ್ದು ಇಲ್ಲಿ. ಭಾರತ-ಪಾಕಿಸ್ತಾನದ ನಡುವಿನ ಸುಪ್ರಸಿದ್ಧ ಸರಹದ್ದು ವಾಘಾ/ಅಟ್ಟಾರಿ ಬಾರ್ಡರ್ ಇರುವುದು ಇದೇ ಜಿಲ್ಲೆಯಲ್ಲಿ. ಪಂಜಾಬ್‌ನಲ್ಲಿರುವ ಅಮೃತಸರವು ಸಿಕ್ಖ್ ಯಾತ್ರಿಕರಿಗೆ ಪವಿತ್ರ ಕ್ಷೇತ್ರವಾಗಿದ್ದರೂ ಎಲ್ಲಾ ಧರ್ಮೀಯರು ಈ ಸುಂದರ ನಗರಕ್ಕೆ ಭೇಟಿ ನೀಡುತ್ತಾರೆ.

ಬಂಗಾರದ ಹೊದಿಕೆಯಲ್ಲಿ ಬೆಳಗುವ ಈ ಭವ್ಯ ಸ್ವರ್ಣ ದೇವಾಲಯವನ್ನು ಕಣ್ತುಂಬಿಸಿಕೊಳ್ಳಲು ನನಗೆ ಭಾಗ್ಯ ದೊರಕಿದ್ದು ಹತ್ತನೇ ತರಗತಿಯ ಬೇಸಿಗೆ ರಜೆಯಲ್ಲಿ. ಜೀವನದಲ್ಲಿ ಒಮ್ಮೆಯಾದರೂ ಭೇಟಿಕೊಡುವ ಸ್ಥಳ ಇದು. ಸ್ವರ್ಣ ದೇವಾಲಯದ ನಿಜವಾದ ಹೆಸರು ಶ್ರೀ ಹರ್‌ಮಂದಿರ್ ಸಾಹಿಬ್. ಸಿಕ್ಖರ ಪಾಲಿಗೆ ಇದೇ ಭಗವಂತನ ನಿವಾಸ. ಹೀಗಾಗಿ ಇದಕ್ಕೆ 'ಹರ್‌ಮಂದಿರ್ ಸಾಹಿಬ್' ಎಂದು ಹೆಸರು.

ಅಮೃತಸರದ ಸ್ವರ್ಣ ಮಂದಿರ ವಿಶಾಲವಾದ ಸರೋವರಕ್ಕೆ 'ಅಮೃತ ಸರೋವರ' ಎಂಬ ಹೆಸರಿದೆ. ಆದರೆ ಈ ಸರೋವರ ನೈಸರ್ಗಿಕವಲ್ಲ. ಇದನ್ನು ಮಂದಿರ ನಿರ್ಮಾಣಕ್ಕೂ ಮೊದಲೇ ಭಕ್ತರ ದೈಹಿಕ ಶ್ರಮದಿಂದ ನಿರ್ಮಿಸಲಾಗಿತ್ತು. ಅಮೃತ ಸರೋವರ ಇರುವ ನಗರ ಎಂಬ ಕಾರಣದಿಂದಲೇ ಈ ನಗರಕ್ಕೆ 'ಅಮೃತಸರ' ಎಂಬ ಹೆಸರು ಬಂದಿದೆ.

ಶ್ರೀ ಹರ್‌ಮಂದಿರ್ ಸಾಹಿಬ್ ಗುರುದ್ವಾರಕ್ಕೆ ಸ್ವರ್ಣಮಂದಿರ ಎಂಬ ಹೆಸರು ಬರಲು ಸ್ವರ್ಣ ಅಥವಾ ಬಂಗಾರವೇ ಕಾರಣ. ದೇವಾಲಯದ ಮೇಲೆ ಹೊದಿಸಿರುವ ಬಂಗಾರದ ಹಾಳೆಗಳ ಆಕರ್ಷಣೆಯ ಕಾರಣ ಬ್ರಿಟಿಷರು ಇದನ್ನು 'ಗೋಲ್ಡನ್ ಟೆಂಪಲ್' ಎಂದು ಕರೆಯಲಾರಂಭಿಸಿದರು.



ಗುರು ಅರ್ಜುನ್ ದೇವ್ 1581 ರಲ್ಲಿ ಹರ್‌ಮಂದಿರ್ ಸಾಹಿಬ್‌ನ ನಿರ್ಮಾಣ ಕಾರ್ಯ ಪ್ರಾರಂಭಿಸಿದರು. ಇದು ಎಂಟು ವರ್ಷಗಳ ನಂತರ ಅಂದರೆ 1589ರಲ್ಲಿ ಪೂರ್ಣಗೊಂಡಿತು. 1604ರಲ್ಲಿ ಸಿಕ್ಖರ ಧಾರ್ಮಿಕ ಗ್ರಂಥವಾದ 'ಆದಿ ಗ್ರಂಥ್' ಅಥವಾ 'ಗುರು ಗ್ರಂಥ್ ಸಾಹಿಬ್' ಅನ್ನು ಇಲ್ಲಿ ಇರಿಸಲಾಯಿತು. ಈ ಮಂದಿರದ ವಾಸ್ತುಶಿಲ್ಪ ಹಿಂದೂ ಮತ್ತು ಇಸ್ಲಾಮಿಕ್ ಶೈಲಿಯ ಸಂಗಮವಾಗಿದೆ. ವಿಶ್ವದಲ್ಲಿಯೇ ಅತಿ ಹೆಚ್ಚು ಜನರು ಭೇಟಿಕೊಡುವ ಸ್ಥಳಗಳಲ್ಲಿ ಒಂದಾಗಿದೆ. ಇಲ್ಲಿ ಪ್ರವೇಶಿಸುವಾಗ ಕಡ್ಡಾಯವಾಗಿ ತಲೆಯನ್ನು ಬಟ್ಟೆಯಿಂದ ಮುಚ್ಚಬೇಕಾಗುತ್ತದೆ.

ಈ ಮಂದಿರಕ್ಕೆ ಆಗಮಿಸುವ ಭಕ್ತರಲ್ಲಿ ಯಾವುದೇ ಭೇದ-ಭಾವವಿಲ್ಲ. ಇಲ್ಲರಿಗೂ ಮಂದಿರದ ಬಾಗಿಲು ತೆರದಿದೆ. ಭಗವಂತನ ಸನ್ನಿಧಾನದಲ್ಲಿ ಊಟ ಹಾಕಬೇಕೆಂದು ಗುರು ನಾನಕ್‌ರವರು 'ಲಂಗರ್' ಎಂಬ ಸಾಮೂಹಿಕ ಅಡುಗೆ ಶಾಲೆ ಆರಂಭಿಸಿದರು. ಇಲ್ಲಿ ಭೇಟಿ ನೀಡಿದ ಭಕ್ತರಿಗೆ ಯಾವುದೇ ಜಾತಿ ಧರ್ಮದ ಭೇದವಿಲ್ಲದೆ ನೆಲದಲ್ಲಿಯೇ ಕೂರಿಸಿ ನಿತ್ಯ ಪ್ರಸಾದ ವಿತರಣೆ ಮಾಡಲಾಗುವುದು.

ಇಲ್ಲಿ ಊಟಕ್ಕೆ ಸಮಯ ನಿಗದಿಯಿಲ್ಲ. ಎಲ್ಲಾ ದಿನಗಳಲ್ಲೂ ಹಗಲು - ರಾತ್ರಿಯೆನ್ನದೆ ದಿನದ 24 ಗಂಟೆಗಳ ಕಾಲ ಅಡುಗೆ ಕೋಣೆಯಲ್ಲಿ ಆಹಾರ ತಯಾರಾಗುತ್ತಲೇ ಇರುತ್ತದೆ. ಭಕ್ತರು ಯಾವಾಗ ಬೇಕಾದರೂ ಇಲ್ಲಿ ಊಟ ಮಾಡಬಹುದು. ಆಹಾರ ಖಾಲಿ ಯಾಗುವುದೇ ಇಲ್ಲ. ಹೆಚ್ಚಿನ ಜನರು ಹರ್‌ಮಂದಿರ್ ಸಾಹಿಬ್‌ಗೆ ಹೇಳಿಕೊಂಡಿರುವ ಹರಕೆಯ ಪ್ರಕಾರ ಸೇವೆ ಸಲ್ಲಿಸುತ್ತಾರೆ.

ಸ್ವರ್ಣ ಮಂದಿರ ದರ್ಶನದ ನಂತರ ನಾವು ಅಲ್ಲಿಂದ 32 ಕಿ.ಮೀ. ದೂರ ವಾಘಾ/ಅಟ್ಟಾರಿ ಗಡಿಗೆ ಪ್ರಯಾಣ ಬೆಳೆಸಿದೆವು. ಇಲ್ಲಿ ಪ್ರತಿದಿನ ಸೂರ್ಯಾಸ್ತ ಸಮಯದಲ್ಲಿ ಭಾರತ ಹಾಗೂ ಪಾಕಿಸ್ತಾನ ದೇಶದ ಸೈನಿಕರು ಧ್ವಜಗಳ ಅವರೋಹಣ (ಲೋವರಿಂಗ್ ಆಫ್ ದ ಫ್ಲಾಗ್ಸ್) ಎಂಬ ಸಮಾರಂಭವನ್ನು ಪ್ರದರ್ಶಿಸುತ್ತಾರೆ. ಸೈನಿಕರು ಶಿಸ್ತಿನ ಸಮವಸ್ತ್ರ, ವರ್ಣರಂಜಿತ ಪಗಡಿಗಳನ್ನು ತೊಟ್ಟು ವೀರಾವೇಶ ದಿಂದ ಪ್ರದರ್ಶಿಸುವ ಈ ಸಮಾರಂಭ ವನ್ನು ನೋಡುವುದೇ ಒಂದು ಸೌಭಾಗ್ಯ ಎನ್ನಬಹುದು. ಯಾವ ದೇಶದ ಗಡಿ ಸೈನಿಕರು ಹೆಚ್ಚು ಎತ್ತರಕ್ಕೆ ಕಾಲು ಎತ್ತುತ್ತಾರೆ ಎಂಬ ಸ್ಪರ್ಧೆ ನಡೆಯುತ್ತದೆ ಇಲ್ಲಿ. ದಿನ ನಿತ್ಯ ಸುಮಾರು 10 ಸಾವಿರ ಪ್ರವಾಸಿಗರು ಇದನ್ನು ನೋಡಲು ಬರುತ್ತಾರೆ. ಬಹಳ ಸಮಯದಿಂದ ಅಮೃತಸರದ ಸ್ವರ್ಣ ಮಂದಿರದ ದರ್ಶನ ಮತ್ತು ಅಲ್ಲಿಯ ಪ್ರಸಿದ್ಧ 'ಲಸ್ಸೀ' ಯನ್ನು ಕುಡಿಯುವ ಆಸೆ ಈಡೇರಿದಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಇದು ನನ್ನ ಮನಸ್ಸಿಗೆ ಅವಿಸ್ಮರಣೀಯ ಅದ್ಭುತ ಅನುಭವ ನೀಡಿದೆ.



ಭಕ್ತಿ ಕಾಮತ್
ದ್ವಿತಿಯ ಪಿಯುಸಿ ವಾಣಿಜ್ಯ ವಿಭಾಗ
ಕ್ರಿಯೇಟಿವ್ ಪ.ಪೂ. ಕಾಲೇಜು,ಕಾರ್ಕಳ


# ನನ್ನ ಬಾಳಿನ ನಾಯಕ ಅಪ್ಪ

ಅಪ್ಪ ಅಪ್ಪ ನೀ ದೇವರು ಕಣಪ್ಪ
ನನ್ನ ಬಾಳಿನ ನಾಯಕ ನೀನಪ್ಪ
ಜಗತ್ತಿನಲ್ಲೆಲ್ಲಾ ತಿರುಗಿಸುತ್ತ ಕರೆದುಕೊಂಡು ಬಂದೆ
ನೀನೆ ನನ್ನ ಜಗತ್ತು ಎಂದು ಹೇಳಿದವನು ನೀನಪ್ಪ

ನಮ್ಮನ್ನು ಹೆಗಲ ಮೇಲೆ ಕೂರಿಸಿಕೊಂಡು ನೀನು
ನೋಡಲಾಗದಿರುವುದನ್ನು
ನನ್ನ ಮಕ್ಕಳು ನೋಡಲಿ ಎಂದು ಹೇಳುವವನು ನೀನಪ್ಪ
ಕೆಟ್ಟದ್ದನ್ನು ಎದುರಿಸಲು ಧೈರ್ಯ ತುಂಬುವವನು
ಉತ್ತಮ ಬದುಕಿಗೆ ಮಾರ್ಗ ತೋರಿದವನು ನೀನಪ್ಪ

ನಮ್ಮ ಆರೋಗ್ಯಕ್ಕಾಗಿ ನಿನ್ನ ಆರೋಗ್ಯವನೇ ಮರೆತಿರುವವನು ಅಪ್ಪ
ನಿನಗೆ ನೋವಾದರೆ ತಡೆಯಲಾರೆನು ಕಣಪ್ಪ
ನಮ್ಮ ಹೊಟ್ಟೆ, ಬಟ್ಟೆ, ವಿದ್ಯೆಗಾಗಿ ತನ್ನ ಶಕ್ತಿ ಮೀರಿ
ದಿನವಿಡಿ ಬೆವರು ಸುರಿಸಿ ದುಡಿಯುವವನು ನೀನಪ್ಪ

ಕಾಲ ಬದಲಾದರೂ ಮನಸ್ಸು ಬದಲಾಗಲಿಲ್ಲ
ಮಕ್ಕಳ ಬದುಕನೇ ಒಳ್ಳೆಯ ಹಾದಿಗೆ ಬದಲಿಸಿದೆ
ವರುಷಗಳು ಕಳೆದರೂ ನನ್ನ ಆಣೆ ನನ್ನ
ಮೇಲಿರುವ ಪ್ರೀತಿ ನಂಬಿಕೆಯಲ್ಲಿ ಕಡಿಮೆ ಕಾಣಿಸಲಿಲ್ಲ



ನಿನ್ನ ಮಾತುಗಳೇ ನನಗೆ ಧೈರ್ಯ
ನಿನ್ನ ಪ್ರೋತ್ಸಾಹವೆ ನನಗೆ ಆತ್ಮ ಸ್ಥೈರ್ಯ
ನಿನ್ನ ಖುಷಿಯೆ ನನ್ನ ಖುಷಿ
ನೀನೆ ನನ್ನ ಬದುಕಿಗೆ ಪ್ರೇರಣೆ

ನನಗೆ ನನ್ನ ಗುರಿಯತ್ತ ಸಾಗಲು ದಾರಿ ತೋರಿಸಿದೆ
ನೀನು ಇಲ್ಲದ ಬದುಕಿಗೆ ಅರ್ಥವಿಲ್ಲ
ಹೇ ತಿರುಪತಿ ವೆಂಕಟೇಶ್ವರ
ನನ್ನ ಮತ್ತು ನನ್ನ ತಂದೆಯ ಪ್ರೀತಿಗೆ ನೀನೆ ಸಾಕ್ಷಿ



ಶ್ರೀಹರಿ ಸಿ.ಆರ್
ದ್ವಿತೀಯ ಪಿಯುಸಿ ಇಬಿಎಸಿ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ


# ನವವಾರಿ

ನೆಮ್ಮದಿಯ ಜಗತ್ತು
ಅಮ್ಮನ ಮಮತೆಯ ತುತ್ತು
ಅಪ್ಪನ ಬೆಚ್ಚಪ್ಪುಗೆಯ ಹೊತ್ತು
ನಾ ಬದುಕುತ್ತಿದ್ದೆ
ಕಲ್ಪನೆಯನ್ನು ಮೀರಿದ ಹೊಸ ಲೋಕ
ಪೋಷಕರ ಸಾವಿರಾರು ಕಿವಿಮಾತುಗಳ ಅಭಿಷೇಕ
ಕಂಗಳಲ್ಲಿ ಕೋಲ್ ಮಿಂಚಿನ ಕನಸುಗಳು ಅನೇಕ
ಹೊತ್ತು ನಾನಿಲ್ಲ ಎಂದೆ
CLEAR ಮಾಡಲೇಬೇಕಿದೆ JEE, CA, NEET
ಸಿಗುವುದಾ ನನಗೆ ಮೆಡಿಕಲ್ ಸೀಟ್?
ಮಾಡಲೇ ಬೇಕಿದೇ ಈ ವರೆಗಿನ ರೆಕಾರ್ಡ್ ಬೀಟ್
ಅದಕ್ಕಾಗಿ ಈಗಿಂದಲೇ ಮಾಡಬೇಕಿದೆ commitmentನ ಮೀಟ್



ಇಂಚರ ಪಟೇಲ್ ಜೆ ಪಿ
ದ್ವಿತೀಯ ಪಿಯುಸಿ ಪಿಸಿಎಂಸಿ
ಹೆಚ್.ಕೆ.ಎಸ್ ಪ.ಪೂ ಕಾಲೇಜು, ಹಾಸನ

# ಕ್ರಿಯೇಟಿವ್ ಕೆಸಡ್ಪೊಂಜಿ ದಿನ




ಕೇಯ್ವುಲದ ಕೆಸರಿನಾಟದ ಉತ್ಸಾಹದಲಿ
ಸವಿ ನೆನಪುಗಳ ಚೀಲ ಹೊತ್ತು
ರುಚಿಕರವಾದ ಅನುಭವಗಳ ಸವಿಯುತ
ಗಟ್ಟಿತನ ತೋರುವ ಕಂಬಳವ ಕಣ್‌ತುಂಬಿಕೊಳುತ
ಗದ್ದೆಯ ಮಣ್ಣಿನ ಸೊಗಡನು ಅರಿಯುತ
ಕ್ರೀಡೆಗಳೊಳಗೆ ಜಗವನೆ ಮರೆತು
ಆಡಾಡಿ ಆನಂದದಿ ನಲಿಯುತ
ಕೂಟದಲಿ ಎಲ್ಲರೊಳಗೊಂದಾಗುವ
ಆಟದ ಮೂಲಕ ಪಾಠ ಕಲಿಸಿತು
ತುಳು ನಾಡಿನ ಹೆಮ್ಮೆಯ ಕೆಸಡ್ಪೊಂಜಿ ದಿನ ॥



ಸಾನ್ವಿ ರಾವ್
ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗ
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ





# ಯೋಗ ಒಂದು ಪರಿಚಯ

ವಿಶ್ವ ಮನುಕುಲಕ್ಕೆ ಪ್ರಾಚೀನ ಭಾರತವು ನೀಡಿರುವ ಅಪೂರ್ವ ಕೊಡುಗೆಗಳಲ್ಲಿ ಯೋಗವೂ ಒಂದು. ಇದು ಒಂದು ಅತ್ಯುತ್ತಮ ಜೀವನ ಪದ್ಧತಿ. ಯೋಗಾಭ್ಯಾಸದಿಂದ ದೈಹಿಕ ಕಾರ್ಯಕ್ಷಮತೆ, ಮಾನಸಿಕ ಸ್ಥಿರತೆ ಮತ್ತು ಸಮತೋಲನವನ್ನು ಕಾಯ್ದುಕೊಳ್ಳಬಹುದಾಗಿದೆ. ಯೋಗದ ಗುರಿ, ದೇಹ ಮತ್ತು ಮನಸ್ಸಿನ ಸಮತೋಲನವನ್ನು ಸಾಧಿಸುವುದರೊಂದಿಗೆ ವ್ಯಕ್ತಿ ಮತ್ತು ಅವನ ಸುತ್ತಲ ಪ್ರಪಂಚದೊಂದಿಗೆ ಸಂಪೂರ್ಣ ಏಕತೆಯನ್ನು ಸಾಧಿಸುವುದೇ ಆಗಿದೆ.

ಯೋಗ ಎಂದರೇನು? ಯೋಗ ಪಿತಾಮಹ ಎಂದು ಕರೆಯಿಸಿಕೊಳ್ಳುವ ಪತಂಜಲಿ ಮಹರ್ಷಿಯು ಮನಸ್ಸಿನ ಚಂಚಲತೆಯನ್ನು ನಿಯಂತ್ರಿಸುವುದನ್ನು ಯೋಗ ಎಂದು ಹೇಳಿದ್ದಾರೆ. ಯೋಗ ಒಂದು ಜೀವನ ವಿಧಾನವಾಗಿದೆ. ದೇಹ, ಬುದ್ಧಿ ಮತ್ತು ಮನಸ್ಸಿಗೆ ಅತೀತವಾದ ಆಸ್ತಿತ್ವ ನೀಡುವುದು ಯೋಗದ ಪರಮ ಗುರಿಯಾಗಿದೆ.

"**ಸಮತ್ವಂ ಯೋಗ ಮುಚ್ಯತೇ**" ಅಂದರೆ ಸಾಮರಸ್ಯ ಅಥವಾ ಸಮತೋಲನವೇ ಯೋಗ ಎಂದು ಹೇಳಬಹುದು. ನಮ್ಮ ಪೂರ್ವಿಕರು ಪ್ರತಿಪಾದಿಸಿರುವಂತ ಯೋಗದ ನಾಲ್ಕು ಮಾರ್ಗಗಳು ಹೀಗಿವೆ.

**1. ಕರ್ಮಯೋಗ :** ನಿಸ್ವಾರ್ಥ ಅಥವಾ ನಿಷ್ಕಾಮ ಸೇವೆ ಪ್ರತಿಯೊಂದು ಕ್ರಿಯೆ ಅಥವಾ ಕರ್ಮವನ್ನು ಪ್ರತಿಫಲಾಪೇಕ್ಷೆಯಿಲ್ಲದೆ ದೇವರಿಗೆ ಸಮರ್ಪಿಸುವುದು.

**2. ಭಕ್ತಿಯೋಗ :** ಭಗವಂತನಲ್ಲಿ ಹೊಂದಿರುವ ನಿರ್ಮಲ ಪ್ರೀತಿಯನ್ನು ಭಕ್ತಿ ಎನ್ನುವರು. ಭಗವಂತನಿಗೆ ಸಂಪೂರ್ಣ ಶರಣಾಗತಿ ಭಕ್ತಿ ಮಾರ್ಗದ ವೈಶಿಷ್ಟ್ಯ.

**3.ರಾಜಯೋಗ:** ಆಕ್ರಮಣಕಾರರು ಒಂದು ದೇಶವನ್ನು ಆಕ್ರಮಿಸಿಕೊಳ್ಳಬೇಕಾದರೆ ಹೇಗೆ ಮೊದಲು ಆ ದೇಶದ ರಾಜಧಾನಿಯನ್ನು ಗೆದ್ದು ಹಿಡಿತಕ್ಕೆ ತೆಗೆದುಕೊಳ್ಳಬೇಕೋ ಹಾಗೆಯೇ ನಮ್ಮೆಲ್ಲ ಸ್ವಭಾವ, ನಡಾವಳಿಗಳ ಮೂಲ ನಿಯಂತ್ರಣ ಕೇಂದ್ರವಾಗಿರುವ ಉಸಿರಾಟ ಹಾಗೂ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವ ಮೂಲಕ ಗುರಿ ತಲುಪುವ ಮಾರ್ಗವೇ ಯೋಗ ಪಿತಾಮಹನೆಂದು ಕರೆಯಲ್ಪಡುವ ಪತಂಜಲಿ ಪ್ರಣೀತವಾದ ರಾಜಯೋಗ.

**4. ಜ್ಞಾನಯೋಗ:** ಭೌತಿಕ ಪ್ರಪಂಚದ ಬಂಧನದಿಂದ ಮುಕ್ತರಾಗಲು ಬುದ್ಧಿಯನ್ನು ವಿವೇಕಪೂರ್ಣವಾಗಿ ಉಪಯೋಗಿಸಿ ಜ್ಞಾನ, ಅಭ್ಯಾಸ, ಚಿಂತನೆ ಮತ್ತು ಧ್ಯಾನಗಳ ಮೂಲಕ ಭಗವಂತನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು. ಮನಸ್ಸನ್ನು ನಿಯಂತ್ರಿಸುವ ಕ್ರಿಯೆ ನಿರಂತರವಾದ ಅಭ್ಯಾಸ, ಸತತ ಸಾಧನೆಯಿಂದ ಆಗುವಂಥದು ಮನಸ್ಸನ್ನು ಪಳಗಿಸಲು, ನಿಯಂತ್ರಿಸಲು ಹಂತ ಹಂತವಾಗಿ ಸಾಧಾನಾ ಪಥದಲ್ಲಿ ಮೇಲೇರ ಬೇಕಾಗುತ್ತದೆ ಅದಕ್ಕಾಗಿ ಪತಂಜಲಿ ಮಹರ್ಷಿಗಳು ರಾಜಯೋಗದಲ್ಲಿ ಎಂಟು ಮೆಟ್ಟಿಲುಗಳನ್ನು ಸೂಚಿಸಿದ್ದಾರೆ. ಆದ್ದರಿಂದಲೇ ರಾಜಯೋಗವನ್ನು ಅಷ್ಟಾಂಗಯೋಗ, ಅಷ್ಟಾಂಗ ಮಾರ್ಗ ಎಂದು ಕರೆಯಲಾಗಿದೆ.

ಅವುಗಳು ಹೀಗಿವೆ,

**1. ಯಮಗಳು:** "ಯಮ" ಎಂದರೆ ನಾವು ಕಲ್ಪಿಸಿಕೊಳ್ಳುವ ಮಹಿಷವಾಹನ ಯಮ ಅಲ್ಲ. ವ್ಯಕ್ತಿ ಮತ್ತು ಸಮಾಜದ ಸಂಬಂಧ ಸಂಪರ್ಕ ಉತ್ತಮಗೊಳ್ಳಬೇಕಾದರೆ ನಮ್ಮ ನಡಾವಳಿಯಲ್ಲಿ ಅನುಸರಿಸಬೇಕಾದ ಕೆಲವು ಮೌಲ್ಯಗಳನ್ನು ಯಮಗಳು ಎನ್ನುತ್ತೇವೆ. ಯಮಗಳು ಐದು, ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ.

**ಅ) ಅಹಿಂಸೆ :** ಕೊಲ್ಲದಿರುವುದು, ತೊಂದರೆ ಮಾಡದಿರುವುದು, ಮಾನಸಿಕ ಅಥವಾ ದೈಹಿಕವಾಗಿ ಯಾವುದೇ ಬಗೆಯ ನೋವುಂಟು ಮಾಡದಿರುವುದು, ಕಾಯಾ ವಾಚಾ ಮನಸಾ ಹಿಂಸೆಯನ್ನು ಮಾಡದಿರುವುದೇ ಅಹಿಂಸೆ.

**ಆ) ಸತ್ಯ :** ನಡೆನುಡಿಗಳಲ್ಲಿ ಸತ್ಯ ಮಾರ್ಗವನ್ನು ಅನುಸರಿಸುವುದು.

**ಇ) ಅಸ್ತೇಯ:** ಸ್ತೇಯ ಎಂದರೆ ಕಳ್ಳತನ, ಅಸ್ತೇಯ ಎಂದರೆ ಕಳ್ಳತನ ಮಾಡದಿರುವುದು. ಅಂದರೆ ತನ್ನದಲ್ಲದ ವಸ್ತುವನ್ನು ಅಪೇಕ್ಷಿಸದಿರುವುದು.

**ಈ) ಬ್ರಹ್ಮಚರ್ಯ:** ಚಿಂತನೆ, ಭಾವನೆ ಮತ್ತು ಆಚರಣೆಗಳಲ್ಲಿ ಸಹ ಕಾಮದ ಬಗ್ಗೆ ಸಂಪೂರ್ಣ ವೈರಾಗ್ಯ ಅತ್ಯಾವಶ್ಯಕ, ಸದಾಚಾರ, ಸದ್ಗ್ರಂಥಗಳ ಅಧ್ಯಯನ, ಸತ್ಸಂಗ ಇತ್ಯಾದಿಗಳ ಮೂಲಕ ಬ್ರಹ್ಮಜ್ಞಾನದ ಅರಿವು ಪಡೆಯಲು ಇಂದ್ರಿಯ ನಿಗ್ರಹ ಅವಶ್ಯಕ. ಇದರಿಂದ ಕ್ಷಮತೆ, ಶಕ್ತಿ, ಸ್ಥಿರವಾದ ಆರೋಗ್ಯ, ಶಾಂತಿ ಮತ್ತು ದೀರ್ಘಾಯುಷ್ಯ ಇವುಗಳನ್ನು ಗಳಿಸಲು ಸಹಾಯ ದೊರಕುತ್ತದೆ.

**ಉ) ಅಪರಿಗ್ರಹ:** ಪರಿಗ್ರಹ ಎಂದರೆ ಸ್ವೀಕರಿಸು, ಸಂಗ್ರಹಿಸು. ಅಪರಿಗ್ರಹ ವೆಂದರೆ ತನಗೆ ಅಗತ್ಯವಾದುದಕ್ಕಿಂತ ಹೆಚ್ಚಿನದನ್ನು ಸ್ವೀಕರಿಸದಿರುವ, ಸಂಗ್ರಹಿಸದಿರುವ ನಿಷ್ಠೆ.

**2. ನಿಯಮಗಳು:** ವೈಯಕ್ತಿಕ ಶಿಸ್ತು, ಆತ್ಮಶುದ್ಧಿ, ಅಂತರಂಗ–ಬಹಿರಂಗ ಸ್ತರಗಳಲ್ಲಿ ಶಾಂತಿಯ ಪಾಲನೆ ಇವುಗಳನ್ನು ನಿಯಮ ಎನ್ನುವರು. ಈ ನಿಯಮಗಳಲ್ಲಿ ಬರುವ ಮೌಲ್ಯಗಳೂ ಐದು, ಶೌಚ, ತಪಸ್ಸು, ಸಂತೋಷ, ಸ್ವಾಧ್ಯಾಯ, ಈಶ್ವರ ಪ್ರಣಿಧಾನ.

**ಅ) ಶೌಚ :** ಶೌಚ ಎಂದರೆ ಶುದ್ಧತೆ, ಶಾರೀರಿಕ ಶುದ್ಧಿ ಮತ್ತು ಮಾನಸಿಕ ಶುದ್ಧಿಗಳಾಗಿ ಎರಡು ವಿಧ, ಪ್ರತಿನಿತ್ಯ ಸ್ನಾನ ಮಾಡುವುದರ ಮೂಲಕ ಸುಗಂಧದ್ರವ್ಯ ಲೇಪನದ ಮೂಲಕ, ಸಿಂಗರಿಸಿಕೊಳ್ಳುವುದರ ಮೂಲಕ ಶಾರೀರಿಕ ಶುದ್ಧಿ ಅಥವಾ ಬಾಹ್ಯಶೌಚವನ್ನು ನಿತ್ಯದಲ್ಲಿ ಹೇಗೊ ಮಾಡಿಕೊಳ್ಳುತ್ತೇವೆ. ಸಹಾನುಭೂತಿ, ಸಂತೋಷ, ಉತ್ತಮ ನಡತೆ ಮತ್ತು ಉತ್ತಮ ಅಭ್ಯಾಸ ಅಂತರಂಗ ಶೌಚ ಅಥವಾ ಮಾನಸಿಕ ಶುದ್ಧಿಗೆ ಅತ್ಯಂತ ಅಗತ್ಯ ಅಂಶಗಳು.

**ಆ) ತಪಸ್ಸು :** ತಪ ಎಂದರೆ ಒಂದರ್ಥ ಸುಡುವುದು, ಗುರಿ ಸಾಧನೆಯಲ್ಲಿ ಅಡಚಣೆಯಾಗಿರುವ ಅತಿಯಾದ ಕಾಮನೆಗಳನ್ನು, ಲಾಲಸೆಗಳನ್ನು ಸುಡುವುದು ತಪಸ್ಸಿಗೆ ಕಠಿಣ ಶಿಸ್ತು ಮತ್ತು ಸಂಯಮ ಅಪೇಕ್ಷಣೀಯ ಎಲ್ಲಾ ದುರ್ಭಾವನೆಗಳನ್ನು ದುವಿಚಾರಗಳನ್ನು ಸುಟ್ಟು ಶಾರೀರಿಕ ಹತೋಟಿ ಹಾಗೂ ಆತ್ಮಶಕ್ತಿಯನ್ನು ಪಡೆಯಲು ನೆರವಾಗುತ್ತದೆ.

**ಇ) ಸಂತೋಷ:** ಮನಸ್ಸು ಶಾಂತವಾಗಿದ್ದಾಗ ಬುದ್ಧಿ ಸಾಮಾನ್ಯವಾಗಿ ಕಾರ್ಯ ನಿರ್ವಹಿಸುತ್ತದೆ. ಸಂತೋಷವುಳ್ಳ ಮನುಷ್ಯ ಅಥವಾ ತೃಪ್ತನಾದವನು ದುಃಖಕ್ಕೆ ಕಾರಣವಾದ ಅಪೇಕ್ಷೆಗಳನ್ನು ತ್ಯಜಿಸುತ್ತಾನೆ.

**ಈ) ಸ್ವಾಧ್ಯಾಯ :** ಸತ್ಯಾನ್ವೇಷಣೆ ಮತ್ತು ಆತ್ಮಜ್ಞಾನಕ್ಕಾಗಿ ಧಾರ್ಮಿಕ ಗ್ರಂಥಗಳ ಪ್ರಮಾಣಬದ್ಧ ಅಧ್ಯಯನವೇ ಸ್ವಾಧ್ಯಾಯ. ಯೋಗ ಸಾಧಕನು ಯೋಗದ ಗ್ರಾಂಥಿಕ ಮತ್ತು ಪ್ರಾಯೋಗಿಕ ಜ್ಞಾನದೊಂದಿಗೆ ಅದರ ವಿವಿಧ ಸ್ವರೂಪಗಳನ್ನು ಒಳಗೊಂಡಿರುವ ಸಾಹಿತ್ಯದ ಪರಿಜ್ಞಾನವನ್ನು ಹೊಂದಿರಬೇಕು.

**ಉ) ಈಶ್ವರ ಪ್ರಣಿದಾನ :** ಸರ್ವ ಶಕ್ತನಾದ ಭಗವಂತನಲ್ಲಿ ಸರ್ವಸಮರ್ಪಣ ಮಾಡುವುದು. "ಅನ್ಯಥಾ ಶರಣಂ ನಾಸ್ತಿ, ತ್ವಮೇವ ಶರಣಂ ಮಮ", ನೀನಲ್ಲದೆ ಶರಣು ಹೋಗಲು ಅನ್ಯರಿಲ್ಲ, ನೀನೊಬ್ಬನೇ ನನಗೆ ಶರಣು ಹೋಗಲು ಇರುವವನು ಎಂಬ ಭಾವನೆ ಹೊಂದಿ, ನಾನು, ನನ್ನದು ಎಂಬ ಭಾವನೆಗಳಿಂದ ಮುಕ್ತನಾಗಿ, ಸರ್ವವನ್ನೂ ಸರ್ವಶಕ್ತನಲ್ಲಿ ಸಮರ್ಪಿಸುವುದು.

**3. ಆಸನಗಳು:** ಇದು ದೇಹ ಹಾಗೂ ಮನಸ್ಸಿಗೆ ಆರೋಗ್ಯ ಹಾಗೂ ಪಟುತ್ವ ನೀಡುತ್ತದೆ.

**4. ಪ್ರಾಣಾಯಾಮ:** ಪ್ರಾಣವೆಂದರೆ ಉಸಿರು, ಆಯಾಮವೆಂದರೆ ಹತೋಟಿಗೆ ತಂದುಕೊಳ್ಳುವುದು ಎಂದು ಅರ್ಥ ಕೊಡುತ್ತದೆ. ಇದು ಉಚ್ವಾಸ ನಿಶ್ವಾಸಗಳ ಮೇಲೆ ನಿಯಂತ್ರಣವನ್ನು ಮತ್ತು ಅತಿ ಮಹತ್ವದ ದಾರ್ಢ್ಯತೆಯನ್ನು ಉಳಿಸಿಕೊಳ್ಳಲು ನೆರವಾಗುತ್ತದೆ.

**5. ಪ್ರತ್ಯಾಹಾರ:** ಪ್ರತ್ಯಾಹಾರವು ಶಬ್ದ, ಸ್ಪರ್ಶ,ರಸ,ರೂಪ ಮತ್ತು ಗಂಧ ಇತ್ಯಾದಿಗಳನ್ನು ಗ್ರಹಿಸುವ ಇಂದ್ರಿಯಗಳನ್ನು ನಿಯಂತ್ರಿಸುವುದಾಗಿರುತ್ತದೆ. ಇದೊಂದು ಬಹಿರಂಗ ಯೋಗದ ಮುಖ್ಯ ಅಂಗವಾಗಿದೆ. ಈ ಬಹಿರಂಗ ಯೋಗವು ಶರೀರವನ್ನು ದೃಢವಾಗಿಯೂ, ಮೃದುವಾಗಿಯೂ ಮತ್ತು ಆರೋಗ್ಯವಾಗಿಯೂ ಇಡುವುದಲ್ಲದೆ ಮನೋಭಾವನೆಗಳನ್ನು ನಿಯಂತ್ರಿಸುತ್ತದೆ. ಮನಸ್ಸು ಇಂದ್ರಿಯಾತೀತವಾಗುತ್ತದೆ. ಪ್ರತ್ಯಾಹಾರವನ್ನು ಬಹಿರಂಗ ಯೋಗ ಮತ್ತು ಅಂತರಂಗ ಯೋಗಗಳ ಸೇತುವೆಯೆಂದು ಪರಿಗಣಿಸಲಾಗಿದೆ.

**6. ಧಾರಣ:** ಯಾವುದೇ ಒಂದು ವಿಷಯದ ಮೇಲೆ ಅಥವಾ ಒಂದು ವಸ್ತುವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು ಧಾರಣ ಎನಿಸುತ್ತದೆ. ಉದಾಹರಣೆಗೆ ಈಶ್ವರನ (ಭಗವಂತನ) ನಾಮಸ್ಮರಣೆ ಅಥವಾ ಜಪಮಾಲೆ ಪಠಿಸುತ್ತಾ ಏಕಾಗ್ರತೆಯನ್ನು ಸಾಧಿಸಲು ಪ್ರಯತ್ನಿಸುವುದು.

**7. ಧ್ಯಾನ:** ಒಂದು ವಸ್ತುವಿನ ಮೇಲೆ ಕೇಂದ್ರೀಕರಿಸಲ್ಪಟ್ಟ ಮನಸ್ಸು ಬೇರೆಯ ವಿಷಯಗಳನ್ನು ಕುರಿತು ಚಿಂತಿಸದೆಯೇ ಅದೇ ವಸ್ತುವನ್ನು ಕುರಿತು ಧ್ಯಾನಿಸುವ ಸ್ಥಿತಿ ದೇವರ ಬಗ್ಗೆ ಅಡೆ–ತಡೆಯಿಲ್ಲದ ಚಿಂತನೆ–ಧ್ಯಾನ ಎನಿಸುತ್ತದೆ. ಹೇಗೆಂದರೆ ಭಗವಂತನ ನಾಮಸ್ಮರಣೆ ಮಾಡುತ್ತಾ ಕೈಯಲ್ಲಿನ ಜಪಮಾಲೆ ಕೆಳಗೆ ಬಿದ್ದರೂ ಗಮನಕ್ಕೆ ಬಾರದಿರುವಂತಹ ಸ್ಥಿತಿ.

**8. ಸಮಾಧಿ:** ದೇಹ ಮತ್ತು ಇಂದ್ರಿಯಗಳು ನಿದ್ರೆಯಲ್ಲಿರುವಂತೆ ವಿಶ್ರಾಂತಿಯಲ್ಲಿರುವುವು ಮತ್ತು ಮನಸ್ಸು ಹಾಗೂ ಜ್ಞಾನೇಂದ್ರಿಯಗಳು ಎಚ್ಚರವಾಗಿರುವುವು ಇದು ಸಮಾಧಿ ಸ್ಥಿತಿ. ಸಾಧಕ ಧ್ಯಾನದ ಸಮಯದಲ್ಲಿ ಸ್ಥಿರೀಕರಿಸಿಕೊಂಡ ವಸ್ತುವಿನಲ್ಲಿ ತಲ್ಲೀನನಾಗುವುದು ಅಂದರೆ ಆ ವಸ್ತು ಬೇರೆಯಲ್ಲ. ತಾನು ಬೇರೆಯಲ್ಲ ಅದು ನಾನೇ ಎಂದು ಆ ವಸ್ತುವಿನಲ್ಲಿ ಪರವಶನಾಗುವುದು ನಿಜವಾದ ಆನಂದದ ಅನುಭವವನ್ನು ಹೊಂದುವುದು ಈ ಸ್ಥಿತಿಯಲ್ಲಿ.

ಯೋಗ ಎಂದರೆ ಬರಿಯ ಆಸನಗಳು ಎಂಬ ಕಲ್ಪನೆ ದೂರವಾಗಿ ಯೋಗ ಒಂದು ಬದುಕಿನ ಕಲೆ ಎಂಬ ವಾಸ್ತವಾರ್ಥದಲ್ಲಿ ಯೋಗ ಬಳಕೆಯಾಗಬೇಕು. ನಮ್ಮ ನಿತ್ಯದ ಕೆಲಸಗಳಲ್ಲಿ ಯೋಗವನ್ನು ಅನ್ವಯ ಮಾಡಿಕೊಂಡಾಗ ಯಶಸ್ಸು ಶತಃಸಿದ್ಧ.




**ಶಿವಕುಮಾರ್**
ಕನ್ನಡ ಉಪನ್ಯಾಸಕರು
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ


## ನಾ ಕನ್ನಡ ಅಭಿಮಾನಿ



ಕನ್ನಡವಿದು ಕವಿಗಳ ಪದಗಳಿಗೆ
ಕನ್ನಡವಿದು ಕಣ್ತುಂಬಿಸೋ ಸುಂದರ ತಾಣಗಳಿಗೆ
ಕನ್ನಡವಿದು ಹಚ್ಚ ಹಸುರಿನ ಬುಗ್ಗೆ
ಕನ್ನಡವಿದು ಸಾವಿರಾರು ಗ್ರಂಥ ಕಾದಂಬರಿಗಳಿಗೆ.

ರಾಜಣ್ಣನ ರಾಗಕ್ಕೆ ವರ್ಧನನ ಅಭಿನಯಕ್ಕೆ
ಅಂಬಿಯ ಆಲಾಪಕ್ಕೆ ಹಂಸಲೇಖರ ನಾದಕ್ಕೆ
ಕುವೆಂಪು ಬೇಂದ್ರೆಯ ಬರಹಕ್ಕೆ ಆಧಾರ ಸ್ತಂಭವಿದು,
ಕನ್ನಡವಿದು.

ಕಲ್ಲಿನ ರಥಕ್ಕೆ, ದಸರಾದ ವೈಭವಕ್ಕೆ
ಹೊಳೆಯ ಶಿಲ್ಪಕ್ಕೆ, ಪುಲಿಕೇಶಿಯ ಪರಾಕ್ರಮಕ್ಕೆ
ಹಿಂದೊಮ್ಮೆ ಬೊಕ್ಕಸದ ವೈಭೋಗಕ್ಕೆ
ನೆಲೆಯಾದ ಗೂಡಿದು, ಕನ್ನಡವಿದು.

ಪರರಿಗೆ ಪಾಂಡಿತ್ಯ, ಹಲವರಿಗೆ ಆತಿಥ್ಯ
ಕಂಬಳದ ಆಟ, ಪರಿಸರದ ಸುಂದರ ನೋಟ
ಪರಭಾಷಿಗ ಕಿಟೆಲ್ ರಚಿಸಿದ ಶಬ್ದಕೋಶವಿರುವ
ಹೆಮ್ಮೆಯ ನಾಡಿದು, ಚೆಲುವಿನ ಬೀಡಿದು
ನಮ್ಮ ಕನ್ನಡವಿದು.

ಮರೆಯಾಗದಿರಲಿ ಮೆರೆಯುತ್ತಲಿರಲಿ
ಮನಗಳಲ್ಲಿ ಬೆರೆಯುತ್ತಲಿರಲಿ
ಕನ್ನಡವು ಕನ್ನಡತನವು ಕಂಚಿನಂತೆ, ಮಿಂಚಿಂನಂತೆ
ಹೊನ್ನಿನಂತೆ ಇನ್ನಷ್ಟು ಹೊಳೆಹೊಳೆಯಲಿ......

ನಮ್ಮ ಹೆಮ್ಮೆಯ ನಾಡಿದು ನಮ್ಮ ಕನ್ನಡ ನಾಡಿದು




**ಮಲ್ಲಿಕಾರ್ಜುನ ನರಗುಂದ**
ವಸತಿ ನಿಲಯ ಪಾಲಕರು,
ಕ್ರಿಯೇಟಿವ್ ಪ.ಪೂ. ಕಾಲೇಜು, ಕಾರ್ಕಳ


## ಜಡೆಗವನ ಸಾಧನೆಯ ಜಾಡು

ಅಚಲ ಮನಸಿರಬೇಕು ಮಾಡಲು ಸಾಧನೆ
ಸಾಧನೆಗೆ ಮುನ್ನುಡಿಯದೆ ನಮ್ಮದೆಯ ಕಲ್ಪನೆ
ಕಲ್ಪನೆಗಳಲೆಂದು ಬಾರದು ನೈಜತೆಯ ಮುನ್ಸೂಚನೆ
ಮುನ್ಸೂಚನೆ ನೀಡದೆ ಹಣೆದುಕೊಳ್ಳುವುದೇ ಸವಾಲಿನ ಬಲೆ
ಬಲೆಯನು ಹರಿದು ಹೊರಬರುವುದೇ ಕಲೆ
ಕಲೆಗೆ ಸಿಗದೆಂದು ಈ ಜಗದಲಿ ನೈಜಬೆಲೆ
ಬೆಲೆ ಕಟ್ಟಲಾಗದೆಂದು ಯಾರೂ ಸಹ ಕಲಾವಿದನಿಗೆ
ಕಲಾವಿದನ ಹಾದಿಯಲಿ ಕಾಲೆಳೆವರೇ ಸುತ್ತಲೂ
ಸುತ್ತಲೂ ನೋಡದೆ ಸಾಗುವುದೇ ಸವಾಲು
ಸವಾಲೆ ಆಗಲಿ ನಮ್ಮ ನೆರಳು
ನೆರಳು ಸಹ ಹೇಳಲಿ ನಮ್ಮ ಸಾಧನೆಯ ತಿರುಳು
ತಿರುಳಿನಲಿ ಬಂಧಿಯಾಗಿರಲಿ ನಮ್ಮ ಕಷ್ಟಗಳು
ಕಷ್ಟಗಳೊ ಇಷ್ಟಗಳೊ ಎಲ್ಲವೂ ಸವಾಲು
ಸವಾಲಿಗೆ ಸವಾಲೆಸೆದು ಮಾಡುವುದೇ ಸಾಧನೆ
ಸಾಧನೆಯೇ ಸಾರ್ಥಕ ಬದುಕಿಗೆ ಭೂಷಣ
ಭೂಷಣವೇ ನಮ್ಮ ಹೆಮ್ಮೆಯು ಪ್ರತಿ ಕ್ಷಣ
ಕ್ಷಣ ಕ್ಷಣ ಮಾಡುವುದಿದು ಸಂತಸದ ಅನಾವರಣ
ಅನಾವರಣವೇ ಆಗಲಿ ನಮ್ಮ ಮನಕೆ ಆ ಆಭರಣ
ಆ ಆಭರಣವೇ ನಮ್ಮ ಹೃದಯ ಬಂಧಿಸಿದ ಆ ಕಂಕಣ
ಆ ಕಂಕಣ ತೊಡಲು ಬಳಿ ಸುಳಿಯದು ಮರಣ




**ತಿಪ್ಪೇಸ್ವಾಮಿ.ಡಿ**
ಭೌತಶಾಸ್ತ್ರ ಉಪನ್ಯಾಸಕರು,
ಕ್ರಿಯೇಟಿವ್ ಪ.ಪೂ ಕಾಲೇಜು, ಕಾರ್ಕಳ


**ಕಾವ್ಯೋಕ್ತಿ** | ಏನಾದರೂ ಆಗು ಮೊದಲು ಮಾನವನಾಗು – ಕುವೆಂಪು

